## ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ: 31/03/2012 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರು | | ಹಾಜರಿದ್ದ ಅಧಿಕಾರಿಗಳು |
|---|---|---|
| ಶ್ರೀಯುತರುಗಳಾದ | | |
| ಕೆ.ಮಹೇಶ್ ಬಾಬು | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ / ಜಂಟಿ ಆಯುಕ್ತರು (ಕಲ್ಯಾಣ) |
| ಸರಸ್ವತಮ್ಮ | ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಹೆಬ್ಬಾಳ / ಸರ್ವಜ್ಞನಗರ / ಯೋಜನೆ–ಯಲಹಂಕ) |
| ಹೆಚ್.ಎಸ್.ರಾಜೇಶ್ವರಿ | ಸದಸ್ಯರು | |
| ಆರ್.ಮಂಜುಳಾದೇವಿ | ಸದಸ್ಯರು | ಅಧೀಕ್ಷಕ ಅಭಿಯಂತರರು (ಮಹದೇವಪುರ) |
| ಅರ್.ರೇಖಾ | ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು (ಶಾಂತಿನಗರ) |
| ಇಂದಿರಾ | ಸದಸ್ಯರು | ಕಲ್ಯಾಣಾಧಿಕಾರಿ ( ಪಶ್ಚಿಮ / ಯಲಹಂಕ / ರಾ.ರಾ.ನಗರ / ದಾಸರಹಳ್ಳಿ / ಮಹದೇವಪುರ / |
| ದೇವಿಕಾಅರಾಣಿ ಶ್ರೀಧರ್ | ಸದಸ್ಯರು | |
| ಗೈರು ಹಾಜರಾದ ಸದಸ್ಯರು | | |
| ಫರೀದಾ | ಸದಸ್ಯರು | |
| ಕೆ.ನಂದಿನಿ ಶ್ರೀನಿವಾಸ್ | ಸದಸ್ಯರು | |
| ಎ.ಎಂ.ಹನುಮಂತೇಗೌಡ | ಸದಸ್ಯರು | |
| ಕ್ವೀನ್ ಎಲಿಜಬೆತ್ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

1. **ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 80/11–12:**

ಆಯುಕ್ತರ ಟಿಪ್ಪಣಿ ದಿನಾಂಕ:01–07–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ 79ರ ಕಾಕ್ಸ್‌ಟೌನ್ ಕಾರ್ಪೋರೇಷನ್ ಕಾಲೋನಿಯಲ್ಲಿ ಶೇಕಡ 22.75ರ ಅನುದಾನದ ಅಡಿಯಲ್ಲಿ ಒಂದು ಮನೆಗೆ 3 ಲಕ್ಷಗಳಂತೆ ಒಟ್ಟು 68 ಮನೆಗಳನ್ನು ನಿರ್ಮಿಸುವುದು ಅತ್ಯವಶ್ಯಕವಾಗಿರುತ್ತದೆ. ಅದರಂತೆ ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ರವರು ಮೂರು ಮನೆಗೆ ರೂ.18.00 ಲಕ್ಷಗಳ ಒಂದು ಅಂದಾಜಿನಂತೆ ಒಟ್ಟು 12 ಕಾಮಗಾರಿಗಳನ್ನು ತಯಾರಿಸಿ ಮಂಜೂರಾತಿಗಾಗಿ ಸಲ್ಲಿಸಿರುತ್ತಾರೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವರ್ಕರ್ಸ್ ಫೆಡರೇಶನ್ – ದಂಡು ಪ್ರದೇಶದ ಪ್ರಧಾನ ಕಾರ್ಯದರ್ಶಿಗಳು ಪತ್ರ ಮುಖೇನ ಕೋರಿರುತ್ತಾರೆ. ಸದರಿ 12 ಕಾಮಗಾರಿಗಳ ಒಟ್ಟು ರೂ.201.00 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಭರಿಸಬಹುದಾಗಿರುತ್ತದೆ.

| ಕ್ರ. ಸಂ | ಕಾಮಗಾರಿಯ ಹೆಸರು | ಅಂದಾಜು ಪಟ್ಟಿ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | Unit 1 Construction of Individual SC/ST Houses in N.C.Colony in Ward No.79 | 18.00 |
| 2 | Unit 2 Construction of Individual SC/ST Houses in N.C.Colony in Ward No.79 | 18.00 |
| 3 | Unit 3 Construction of Individual SC/ST Houses in N.C.Colony in Ward No.79 | 18.00 |
| 4 | Unit 4 Construction of Individual SC/ST Houses in N.C.Colony in Ward No.79 | 18.00 |
| 5 | Unit 5 Construction of Individual SC/ST Houses in N.C.Colony in Ward No.79 | 18.00 |
| 6 | Unit 6 Construction of Individual SC/ST Houses in N.C.Colony in Ward No.79 | 18.00 |
| 7 | Unit 7 Construction of Individual SC/ST Houses in N.C.Colony in Ward No.79 | 18.00 |
| 8 | Unit 8 Construction of Individual SC/ST Houses in N.C.Colony in Ward No.79 | 18.00 |
| 9 | Unit 9 Construction of Individual SC/ST Houses in N.C.Colony in Ward No.79 | 18.00 |
| 10 | Unit 10 Construction of Individual SC/ST Houses in N.C.Colony in Ward No.79 | 18.00 |
| 11 | Unit 11Construction of Individual SC/ST Houses in N.C.Colony in Ward No.79 | 18.00 |
| 12 | Unit 12 Construction of Individual SC/ST Houses in N.C.Colony in Ward No.79 | 06.00 |
| | **Total** | 204.00 |

ಈ ಮೇರೆಗೆ ಮೇಲ್ಕಂಡ 12 ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ ರೂ.204.00 ಲಕ್ಷಗಳನ್ನು ಶೇಕಡ 22.75ರ ಅನುದಾನದ ಅಡಿಯಲ್ಲಿ 2011-12ನೇ ಸಾಲಿನ ಆಯವ್ಯಯದಲ್ಲಿ ಕೈಗೊಳ್ಳುವ ಬಗ್ಗೆ ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ಅನುದಾನದ ಲಭ್ಯತೆ ಮೇರೆಗೆ ಕಾಮಗಾರಿ ಕೈಗೊಳ್ಳಲು ಒಪ್ಪಿದೆ

## 2. **ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 165/11-12:**

ಆಯುಕ್ತರ ಟಿಪ್ಪಣಿ ದಿನಾಂಕ:16-09-2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವರ್ಕ್‌ರ್ಸ್ ಫೆಡರೇಷನ್ ದಂಡು ಪ್ರದೇಶದವರು ಆಯುಕ್ತರವರ ಅಧ್ಯಕ್ಷತೆಯಲ್ಲಿ ದಿನಾಂಕ 25.06.2011ರಂದು ನಡೆದ ಸಭೆಯಲ್ಲಿ "ಪೌರ ಕಾರ್ಮಿಕರ ಕೇರಿಗಳಿಗೆ ಶೇ.22.75ರಡಿಯಲ್ಲಿ ರೂ.5.00 (ಐದು ಕೋಟಿ) ಕೋಟಿಗಳ ಅನುದಾನವನ್ನು ಮೀಸಲಿಡುವ ವಿಷಯದಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿ ಹಲವಾರು ಪೌರಕಾರ್ಮಿಕರ ಕೇರಿಗಳಿದ್ದು, ಪೌರ ಕಾರ್ಮಿಕರು, ಗ್ಯಾಂಗ್‌ಮೆನ್ ಮತ್ತು ತೋಟಗಾರಿಕೆ ನೌಕರರು ಮತ್ತು ಇತರೆ ನೌಕರರ ಕೇರಿಗಳಿಗೆ ಸಿಮೆಂಟ್ ರಸ್ತೆ ನಿರ್ಮಾಣ, ಒಳಚರಂಡಿ ರಸ್ತೆ, ನೀರು, ಪುರಾತನ ದೇವಾಲಯಗಳ ಅಭಿವೃದ್ದಿ, ಬೋರ್‌ವೆಲ್ ಹಾಗೂ ರಾಷ್ಟ್ರೀಯ ಹಬ್ಬಗಳಾದ ಅಂಬೇಡ್ಕರ್ ದಿನಾಚರಣೆ, ಕನ್ನಡ ರಾಜ್ಯೋತ್ಸವ ಮತ್ತು ದಸರಾ ಹಬ್ಬದ ಆಚರಣೆಗಳು, ದೀನದಲಿತರ ಮಕ್ಕಳ ಹೆಚ್ಚಿನ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ಮತ್ತು ವಿವಿಧ ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಹಾಗೂ ಪಾಲಿಕೆಯ ನೌಕರರು ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ ಅಪಘಾತವಾಗಿ ಕೈಕಾಲು ಮುರಿದಂತಹ ನೌಕರರುಗಳಿಗೆ ವೀಲ್ ಚೇರ್ ಇನ್ನಿತರೆ ಸಹಾಯವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವರ್ಕ್‌ರ್ಸ್ ಫೆಡರೇಷನ್ ದಂಡು ಪ್ರದೇಶದ ವತಿಯಿಂದ ಮಾಡಲು ಪಾಲಿಕೆಯ ಶೇ.22.75ರ ಅನ್ನುದಾನದಲ್ಲಿ 2011-12ನೇ ಸಾಲಿಗೆ ರೂ.5.00 (ರೂಪಾಯಿ ಐದು ಕೋಟಿ) ಕೋಟಿಗಳ ಅನುದಾನವನ್ನು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಶೇ.22.75ರ ಅಡಿಯಲ್ಲಿ ಈಗಾಗಲೇ ಅನುಷ್ಠಾನದಲ್ಲಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವರ್ಗದವರ ಕಲ್ಯಾಣ ಕಾರ್ಯಕ್ರಮಗಳ ಅಡಿಯಲ್ಲಿ (ಪಟ್ಟಿಯನ್ನು ಅನುಬಂಧ "ಅ" ರಲ್ಲಿ ಈ ಟಿಪ್ಪಣಿಯೊಂದಿಗೆ ಸಲ್ಲಿಸಲಾಗಿದೆ) (iii) ಇತರೆ ಕಾರ್ಯಕ್ರಮಗಳು (8) 'ಈಗಾಗಲೇ ರೂಪಿಸಿರುವ ಕಾರ್ಯಕ್ರಮಗಳನ್ನು ಹೊರತಿಪಡಿಸಿ ಇತರೆ ಯಾವುದಾದರೂ ಆರ್ಥಿಕ ಅಭಿವೃದ್ದಿ ಕಾರ್ಯಕ್ರಮಗಳು' ಅಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವರ್ಕ್‌ರ್ಸ್ ಫೆಡರೇಷನ್ ದಂಡು ಪ್ರದೇಶದವರು ಕೋರಿರುವ ರೂ.5.00 (ರೂಪಾಯಿ ಐದು ಕೋಟಿ) ಕೋಟಿ ಮೊತ್ತದ ಕಾರ್ಯಕ್ರಮಗಳನ್ನು 2011-12ನೇ ಸಾಲಿನ 22.75% ಕಲ್ಯಾಣ ಕಾರ್ಯಕ್ರಮಗಳ ಅಡಿಯಲ್ಲಿ ಅಳವಡಿಸಿಕೊಳ್ಳುವ

ವಿಷಯದಲ್ಲಿ ಸೂಕ್ತ ತೀರ್ಮಾನ ಕೋರಿ ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

– ಮುಂದೂಡಿದೆ –

## 3. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 263/11–12:

ಆಯುಕ್ತರ ಟಿಪ್ಪಣಿ ದಿನಾಂಕ: 08–11–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ವಿಭಾಗ ವ್ಯಾಪ್ತಿಯಲ್ಲಿ 2009–10ನೇ ಸಾಲಿನಲ್ಲಿ ಶೇ.22.75ರ ಅನುದಾನದಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕಾಮಗಾರಿ ಸಂಕೇತ, ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ದೊರೆತಿರುತ್ತದೆ. ಸದರಿ ವಿಭಾಗದಲ್ಲಿ ಈ ಹಿಂದೆ ಕಾರ್ಯಪಾಲಕ ಅಭಿಯಂತರರಾಗಿದ್ದ ಶ್ರೀ ಕೆ.ಆರ್.ಗುಂಡಪ್ಪಶೆಟ್ಟಿ ರವರು ಆಕಸ್ಮಿಕವಾಗಿ ನಿಧನ ಹೊಂದಿದ್ದರಿಂದ ಕೆಳಕಂಡ ಕಾಮಗಾರಿಗಳಿಗೆ ಇದುವರೆವಿಗೂ ಟೆಂಡರ್ ಆಹ್ವಾನಿಸಿರುವುದಿಲ್ಲ.

ಸದರಿ ಕಾಮಗಾರಿಗಳನ್ನು ಪ್ರಸ್ತುತ 2010–11ನೇ ಸಾಲಿನ ದರ ಪಟ್ಟಿಯಂತೆ ಅಂದಾಜು ಪಟ್ಟಿಯನ್ನು ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರು ತಯಾರಿಸಿ ಮಂಜೂರಾತಿಗಾಗಿ ಸಲ್ಲಿಸಿರುತ್ತಾರೆ.

ಸದರಿ ಕಾಮಗಾರಿಗಳು ಸಾರ್ವಜನಿಕರ ಹಿತದೃಷ್ಟಿಯಿಂದ ಅತ್ಯವಶ್ಯಕವಾಗಿರುತ್ತವೆ. ಕಾಮಗಾರಿಗಳ ವಿವರಗಳು ಕೆಳಕಂಡಂತೆ ಇರುತ್ತವೆ.

| ಕ್ರ ಸಂ | ಕಾಮಗಾರಿಯ ಹೆಸರು | ಅಂದಾಜು ಪಟ್ಟಿ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | Area development at Vinobha Nagara A.K.Colony, K.G.Halli | 15.00 |
| 2 | Area development at Samadhanangara, A.K.Colony | 15.00 |
| 3 | Area development at Kariyana Palya | 15.00 |
| 4 | Area development at Chuna Lane (1) | 20.00 |
| 5 | Area development at Chuna Lane (2) | 20.00 |
| 6 | Area development at Chuna Lane (3) | 15.00 |
| 7 | Area development at gandhinagara, K.G.Halli | 20.00 |
| 8 | Area development at Muddappa Garden | 15.00 |
| 9 | Area development at Krishnappa Garden | 15.00 |
| 10 | Area development at Muninarayanappa Garden | 25.00 |
| **Total** | | **175.00** |

ಮೇಲ್ಕಂಡ 10 ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ ರೂ.175.00 ಲಕ್ಷಗಳನ್ನು ಶೇ. 22.75ರ ಅನುದಾನದಡಿಯಲ್ಲಿ ಮಂಜೂರಾಗಿರುವುದರಿಂದ ಸದರಿ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲು ಅನುಮೋದನೆಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

– ಮುಂದೂಡಿದೆ –

## 4. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 272/11–12:

ಆಯುಕ್ತರ ಟಿಪ್ಪಣಿ ದಿನಾಂಕ: 08–11–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರಾದ ಶ್ರೀಮತಿ ಲಕ್ಷ್ಮೀ ಚಿಕ್ಕೇಗೌಡರವರು ಮನವಿ ಸಲ್ಲಿಸಿ ವಾರ್ಡ್ ನಂ.44ರಲ್ಲಿ ಸಿ.ಆರ್.ಎಫ್.ಅಡಿಯಲ್ಲಿ ರೂ.300.00 ಲಕ್ಷಗಳ ಮೊತ್ತದ ಸಾರ್ವಜನಿಕ ಸಿವಿಲ್ ಕಾಮಗಾರಿಯನ್ನು ಕೆ.ಅರ್.ಡಿ.ಐ.ಎಲ್.ವತಿಯಿಂದ ತೆಗೆದುಕೊಳ್ಳಲು ಕೋರಿರುತ್ತಾರೆ.

ಸಾರ್ವಜನಿಕ ಸಿವಿಲ್ ಕಾಮಗಾರಿಗಳು ಪುಟ ಸಂಖ್ಯೆ 1 ಕಂಡಿಕೆ (2) ರಲ್ಲಿ ನಮೂದಿಸಿರುವ ಕ್ರಮ ಸಂಖ್ಯೆ 1 ರಿಂದ 20 ಕಾಮಗಾರಿ ಕೆಲಸಗಳನ್ನು ತೋರಿಸಲಾಗಿದೆ. ಹಾಗೂ ಕಂಡಿಕೆ (10) ರಲ್ಲಿ ಮಾನ್ಯ ಆಯುಕ್ತರು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ತರಲು ಅನುಮೋದಿಸಲಾಗಿದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಅದ್ಯ ಗಮನಕ್ಕೆ ತರುತ್ತಾ ವಾರ್ಡ್ ನಂ.44ರಲ್ಲಿ ಸಿ.ಆರ್.ಎಫ್.ಅಡಿಯಲ್ಲಿ ತೆಗೆದುಕೊಂಡಿರುವ ಸಿವಿಲ್ ಕಾಮಗಾರಿಗಳನ್ನು ನಗರ ಪಾಲಿಕೆ ಸದಸ್ಯರು ಕೋರಿರುವಂತೆ ಕೆ.ಅರ್.ಡಿ.ಐ.ಎಲ್. ರವರಿಗೆ ವಹಿಸಿಕೊಡುವ ಬಗ್ಗೆ ಅನುಮೋದನೆಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ಸದರಿ ಯೋಜನೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ವ್ಯಾಪ್ತಿಗೆ ಬಾರದಿರುವುದರಿಂದ ಕೈಬಿಡಲಾಯಿತು.

## 5. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 307/11–12

ವಿಶೇಷ ಆಯುಕ್ತರ ಟಿಪ್ಪಣಿ ದಿನಾಂಕ:17.01.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಹದೇವಪುರ ವಲಯದ ಕೆ.ಅರ್.ಪುರ ವಿಭಾಗದ ವಾರ್ಡ್ ಸಂಖ್ಯೆ 52 ರಲ್ಲಿ 2011–12ನೇ ಸಾಲಿನ ಆಯವ್ಯಯದ ಶೇ.22.75ರ ಯೋಜನೆಯಡಿಯಲ್ಲಿ 82 ಒಂಟಿ ಮನೆಗಳನ್ನು ಹಾಗೂ 6 ಸಿವಿಲ್ ಕಾಮಗಾರಿಗಳನ್ನು ಕೆ.ಆರ್.ಪುರದ ವಾರ್ಡ್ ಸಂಖ್ಯೆ 52 ರಲ್ಲಿ ಕೈಗೊಳ್ಳ:ಲು ಕೋರಿದ್ದು, ಈ 7 ಕಾಮಗಾರಿಗಳಿಗೆ ▯.366.00 ಲಕ್ಷಗಳನ್ನು ಹೆಚ್ಚುವರಿಯಾಗಿ ಶೇಕಡ 22.75ರ ಯೋಜನೆಯಡಿಯಲ್ಲಿ ನೀಡಲು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗಾಗಿ ಈ ಪ್ರಸ್ತಾವನೆಯನ್ನು ಸಲ್ಲಿಸಿದೆ.

| Sl. No. | Name of Work | Approximate value of work (▯. In lakhs) |
|---|---|---|
| 1 | Construction of 82 Nos. individual houses for SC/ST beneficiaries | 246.00 |
| 2 | Construction of RCC drain and road in 1st main road A.K.Colony | 20.00 |
| 3 | Construction of RCC drain and road in 2nd main road A.K.Colony | 20.00 |
| 4 | Construction of RCC drain and Cross roads in A.K.Colony | 20.00 |
| 5 | Construction of RCC drain and road in A.K.Colony 1st Cross, Bhattarahalli | 20.00 |
| 6 | Construction of RCC drain and road in A.K.Colony 2nd Cross, Bhattarahalli | 20.00 |
| 7 | Construction of RCC drain and road in A.K.Colony 3rd Cross, Bhattarahalli | 20.00 |
| | **Total** | **366.00** |

ಮೇಲ್ಕಂಡ 7 ಕಾಮಗಾರಿಗಳಿಗೆ ಒಟ್ಟು ▯.366.00 ಲಕ್ಷಗಳೆಂದು ಅಂದಾಜಿಸಿದ್ದು, ಈ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ, ಹಣಕಾಸು ಒದಗಿಸಿ, ಜಾಬ್ ಕೋಡ್ ನೀಡಲು ಅನುಮೋದನೆಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

– ಮುಂದೂಡಿದೆ –

## 6. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 321/11–12:

ವಿಶೇಷ ಆಯುಕ್ತರ ಟಿಪ್ಪಣಿ ದಿನಾಂಕ:10.02.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಾಸರಹಳ್ಳಿ ವಲಯ ವ್ಯಾಪ್ತಿಯ ವಾರ್ಡ್ ಸಂಕ್ಯೆ 71 (ಹೆಗ್ಗನಹಳ್ಳಿ) ವ್ಯಾಪ್ತಿಯಲ್ಲಿ ಬರುವ ಪ್ರೆಂಡ್ಸ್ ಕಾಲೋನಿ, ಮಾರುತಿನಗರ ಮತ್ತು ಹೆಗ್ಗನಹಳ್ಳಿ ಹಳೆ ಊರಿನ ಹರಿಜನ ಕಾಲೋನಿಗಳಲ್ಲಿ ಶೇ.22.75ರ ಅನುದಾನದಡಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ವಿವಿಧ ಕಾಮಗಾರಿಗಳಾದ ಸಿಮೆಂಟ್ ಕಾಂಕ್ರೀಟ್ ರಸ್ತೆ, ಚರಂಡಿ ನಿರ್ಮಿಸಿ ಕವರಿಂಗ್ ಸ್ಲ್ಯಾಬ್ ಅಳವಡಿಸುವುದು, ರಸ್ತೆ

ದುರಸ್ಥಿ ಕಾಮಗಾರಿ ಮತ್ತು ಇತರೇ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಗೊಳ್ಳಲು ಉಲ್ಲೇಖದಂತೆ ಸ್ಥಳೀಯ ಬಿ.ಬಿ.ಎಂ.ಪಿ. ಸದಸ್ಯರು ಕೋರಿರುತ್ತಾರೆ.

ಅದರಂತೆ, ಸದಸ್ಯರು ಮಾಡಿರುವ ಮನವಿಯ ಮೇರೆಗೆ, ಅಂದಾಜು ಮೊತ್ತ ಒಟ್ಟು ರೂ.100.00 ಲಕ್ಷಗಳಿಗೆ ಒಟ್ಟು ಆರು ಕಾಮಗಾರಿಗಳನ್ನು ಕೈಗೊಳ್ಳಲು 2011-12ನೇ ಸಾಲಿನ ಶೇಕಡ 22.75ರ ಅನುದಾನದಡಿ ಜಾಬ್ ಕೋಡ್ ಪಡೆದು ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**– ಮುಂದೂಡಿದೆ –**

## 6. <u>ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 342/11-12:</u>

ವಿಶೇಷ ಆಯುಕ್ತರ ದಿನಾಂಕ: 02.03.12ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ರಾಜರಾಜೇಶ್ವರಿನಗರ ವಲಯಕ್ಕೆ ಸಂಬಂಧಿಸಿದ ವಾರ್ಡ್ ಸಂಖ್ಯೆ 72ರಲ್ಲಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಶತಮಾನೋತ್ಸವ ಸಮಿತಿ ಟ್ರಸ್ಟ್, ಸ್ಫೂರ್ತಿಧಾಮ ಅವರಣದೊಳಗೆ ಕೆಲವೊಂದು ಮೂಲಭೂತ ಸೌಕರ್ಯಗಳಿಗೆ ವಿಶೇಷ ಘಟಕ ಯೋಜನೆಯಡಿ ಆರ್ಥಿಕ ನೆರವು ಕೋರಿ ದಿನಾಂಕ 06.12.2010 ರಂದು ಪ್ರಸ್ತಾವನೆಯನ್ನು ಸಲ್ಲಿಸಲಗಿತ್ತು. ಪ್ರಸ್ತಾವನೆಯ ಬೇಡಿಕೆಗೆ ಸಂಬಂಧಿಸಿದಂತೆ ಅನುಮೋದನೆ ಕೋರಿ ಕೇಂದ್ರ ಕಛೇರಿಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಪ್ರಸ್ತಾವನೆಯನ್ನು ಕೈಬಿಟ್ಟಿರುವುದಾಗಿ ತಿಳಿಸಲಾಗಿರುತ್ತದೆ.

ಇದರಂತೆ ದಿನಾಂಕ 07.12.2011 ರಂದು ಸಂಬಂಧಪಟ್ಟ ಟ್ರಸ್ಟ್ ನವರಿಗೆ ಅಪರ ಆಯುಕ್ತರು, ರಾಜರಾಜೇಶ್ವರಿನಗರ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಿಂಬರಹವನ್ನು ನೀಡಲಾಗಿರುತ್ತದೆ.

ಸದರಿ ಸಂಸ್ಥೆಯವರು ದಿನಾಂಕ 14.12.2011 ರಂದು ಅಪರ ಆಯುಕ್ತರು, ರಾಜರಾಜೇಶ್ವರಿನಗರ ವಲಯ ರವರಿಗೆ ಮರು ಮನವಿ ನೀಡಿರುತ್ತಾರೆ.

ಮನವಿಯಲ್ಲಿ ಉಲ್ಲೇಖಿತ (3) ರ ಸರ್ಕಾರಿ ಆದೇಶದ ಪ್ರಕಾರ ಸರ್ಕಾರದಿಂದ ಅನುಮೋದಿಸಲ್ಪಟ್ಟಿರುವ ಮಾಸ್ಟರ್ ಪ್ಲಾನ್-2015ರ ಪ್ರಕಾರ ಸದರಿ ಜಮೀನನ್ನು (ಸ್ಥಳ) ಸಾರ್ವಜನಿಕ ಅಥವಾ ಅರೆ ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಿರುವುದಾಗಿ ಉಲ್ಲೇಖಿತ ಪತ್ರ 3 ರಲ್ಲಿ ಸ್ಪಷ್ಟವಾಗಿರುತ್ತದೆ. ಈ ಸ್ಥಳವನ್ನು ಗುತ್ತಿಗೆ ಆಧಾರದ ಮೇಲೆ ನಮ್ಮ ಟ್ರಸ್ಟ್‌ಗೆ ನೀಡಲಾಗಿದೆ. ಸರ್ಕಾರವು ಅವಧಿ ಮುಗಿದ ಕೂಡಲೇ ಸದರಿ ಸ್ಥಳವನ್ನು ಹಿಂದಕ್ಕೆ ಪಡೆಯಬಹುದು ಅಥವಾ ಸಂಸ್ಥೆಗೆ ಸದರಿ ಭೂಮಿಯ ಗುತ್ತಿಗೆಯನ್ನು ನವೀಕರಿಸಿ ಮುಂದುವರೆಸಬಹುದು.

ನವೀಕರಿಸಿದ್ದಲ್ಲಿ ಸದರಿ ಭೂಮಿಯು (ಸ್ಥಳವು) ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಅಭಿವೃದ್ಧಿಪಡಿಸಲಿರುವ ಎಲ್ಲಾ ಮೂಲಭೂತ ಸೌಕರ್ಯಗಳು ಬಿ.ಬಿ.ಎಂ.ಪಿ. ಅಧೀನಕ್ಕೆ ಅಥವಾ ಸರ್ಕಾರದ ಅಧೀನಕ್ಕೆ ಒಳಪಡುತ್ತವೆ. ಆದುದರಿಂದ ಯಾವುದೇ ಕಾರಣಕ್ಕೂ ಸರ್ಕಾರಿ ಹಣ ದುರುಪಯೋಗವಾಗುವ ಸಾಧ್ಯತೆ ಇರುವುದಿಲ್ಲ. ಆದ್ದರಿಂದ ದಯಮಾಡಿ ನಮ್ಮ ಮನವಿಯನ್ನು ಪುರಸ್ಕರಿಸಿ ಅನುದಾನ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಶತಮಾನೋತ್ಸವ ಸಮಿತಿ ಟ್ರಸ್ಟ್ (ರಿ) ರವರಿಗೆ ಹೇರೋಹಳ್ಳಿ ಗ್ರಾಮ ಸರ್ವೆ ನಂ.63 ರಲ್ಲಿ 30 ಎಕರೆ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಸರ್ಕಾರ ಮಂಜೂರು ಮಾಡಿರುತ್ತದೆ. ಸದರಿ ಪ್ರದೇಶದಲ್ಲಿ ಸ್ಫೂರ್ತಿಧಾಮ ಅಂಬೇಡ್ಕರ್ ಸ್ಮಾರಕ ಬೇಡಿಕೆಯ ವಿವರ.

| ಕ್ರ. ಸಂ. | ಅನುದಾನ ಕೋರಿರುವ ವಿವರ | ಅನುದಾನದ ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | ಅಂಬೇಡ್ಕರ್ ಸ್ಮಾರಕ ಕೇಂದ್ರದಲ್ಲಿ ಉತ್ತಮವಾದ ಅಂಬೇಡ್ಕರ್ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲು ಮತ್ತು ಕಟ್ಟಡ ಇತರೆ ಮೂಲಭೂತ ಸೌಕರ್ಯಗಳಿಗಾಗಿ | 25.00 |
| 2 | ತರಬೇತಿಗೆ ಬರುವ ಯುವಕ ಯುವತಿಯರಿಗೆ ಒಂದು ವಿದ್ಯಾರ್ಥಿ ನಿಲಯದ ನಿರ್ಮಾಣಕ್ಕಾಗಿ | 15.00 |
| 3 | ತರಬೇತಿ ಕೇಂದ್ರವನ್ನು ಉತ್ತಮ ಪಡಿಸಲು ಮೂಲಭೂತ ಸೌಕರ್ಯಗಳ ಅಗತ್ಯತೆಗಾಗಿ | 15.00 |
| | ಒಟ್ಟು | 55.00 |

ರಾಜರಾಜೇಶ್ವರಿನಗರ ವಲಯದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಶೈಕ್ಷಣಿಕ ಕಲ್ಯಾಣ ಕಾರ್ಯಕ್ರಮಗಳ ಪರಿಷ್ಕೃತ ಕ್ರಿಯಾ ಯೋಜನೆಯ ಕಾರ್ಯಕ್ರಮದಾದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಆಡಳಿತ ಮಂಡಳಿಗಳು ನಡೆಸುವ ಶಾಲಾ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಅನುದಾನ ಘಟಕದ 14 ವಾರ್ಡ್‌ಗಳಿಗೆ ಸುಮಾರು ರೂ.84.00 ಲಕ್ಷ ಅನುದಾನ ಮೀಸಲಿಟ್ಟಿರುತ್ತಾರೆ. ಇತರೆ ಕಲ್ಯಾಣ ಕಾರ್ಯಕ್ರಮಗಳಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ಯೋಗಸ್ಥ ಮಹಿಳೆಯತಿಗೆ ಹೊಸದಾಗಿ ಹಾಸ್ಟೇಲ್‌ಗಳನ್ನು ನಿರ್ಮಿಸಲು ಸುಮಾರು ರೂ.42.00 ಲಕ್ಷ ಅನುದಾನ ಮೀಸಲಿಟಟ್ಟಿರುತ್ತಾರೆ. ಒಟ್ಟು ರೂ.122.00 ಲಕ್ಷ ಅನುದಾನ ಲಭ್ಯವಿದ್ದು, ಇದರಲ್ಲಿ ರೂ.55.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲು ಕೋರಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಸಮಿತಿಯ ಅವಗಾಹನೆಗೆ ತರುತ್ತಾ ಸದರಿ ಪ್ರಸ್ಥಾವನೆಯನ್ನು ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

<u>ನಿರ್ಣಯ:</u> ದಿನಾಂಕ 02.03.2012ರ ವಿಶೇಷ ಆಯುಕ್ತರ ಟಿಪ್ಪಣಿ ಒಪ್ಪಲಾಯಿತು.

## 7. <u>ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 343/11-12:</u>

ವಿಶೇಷ ಆಯುಕ್ತರ ದಿನಾಂಕ: 08.03.2012ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶ್ಚಿಮ ವಲಯಕ್ಕೆ ಸಂಬಂಧಿಸಿದಂತೆ, ಗೌತಮ ಬುದ್ಧ ಐಟಿಐ., ಚಾಮರಾಜಪೇಟೆ, ಬೆಂಗಳೂರು, ಮಾತಂಗ ಪರಿವಾರ ಮಹಿಳಾ ಸೇವಾ ಸಮಾಜ (ರಿ)., ಜಗಜೀವನರಾಮ್ ನಗರ, ಬೆಂಗಳೂರು, ಜಾಂಬವತಿ ಮಹಿಳಾ ಸ್ವಸಹಾಯ ಸಂಘ(ರಿ)., ವಿ.ಎಸ್.ಗಾರ್ಡನ್, ಜೆ.ಜೆ.ಆರ್.ನಗರ, ಬೆಂಗಳೂರು ಮತ್ತು ವೈಸ್ ಇನ್‌ಫ್ಲೋಟೆಕ್ ಸರ್ವೀಸ್, ಚಾಮರಾಜಪೇಟೆ, ಬೆಂಗಳೂರು. ಈ ನಾಲ್ಕು ಸಂಸ್ಥೆಯವರು ಮನವಿಯನ್ನು ಸಲ್ಲಿಸಿ, ತಮ್ಮ ಸಂಸ್ಥೆಯು ಪ.ಜಾತಿ ಆಡಳಿತ ಮಂಡಳಿಗೆ ಸೇರಿದ್ದು, ಕಳೆದ 10 ರಿಂದ 15 ವರ್ಷಗಳಿಂದ ಪ.ಜಾತಿ/ಪ.ಪಂಗಡ ವರ್ಗದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಉಚಿತವಾಗಿ ಐಟಿಐ ತರಬೇತಿ, ಸಂಜೆ ಪಾಠಶಾಲೆ, ಕಂಪ್ಯೂಟರ್ ತರಬೇತಿ ಮತ್ತು ಇತರೆ ಸಾಮಾಜಿಕ ಚಟುವಟಿಕೆಗಳನ್ನು ಉಚಿತವಾಗಿ ನೀಡಲಾಗುತ್ತಿದ್ದು, ಇದರ ಪ್ರಯೋಜನೆ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಉದ್ಯೋಗವನ್ನು ಸಹ ಕಲ್ಪಿಸಲಾಗಿದ್ದು, ಇನ್ನು ಹೆಚ್ಚಿನ ಸಾಮಾಜಿಕ ಕೆಲಸಗಳನ್ನು ನಿರ್ವಾಹಿಸಲು ಸಂಸ್ಥೆಯು ಆರ್ಥಿಕ ಸಂಕಷ್ಟ ಎದುರಿಸುತ್ತಿರುವುದರಿಂದ ಈ ಸಂಸ್ಥೆಗೆ ಬರುವಂತಹ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಉಚಿತ ಗಣಕಯಂತ್ರ ತರಬೇತಿ ನೀಡಲು ಕನಿಷ್ಠ 20 ರಿಂದ 25 ಗಣಕಯಂತ್ರಗಳನ್ನು ಪಾಲಿಕೆಯ ಶೇ.22.75ರಡಿ ಒದಗಿಸಲು ಕೋರಿರುತ್ತಾರೆ.

ಈ ಬಗ್ಗೆ ಸಂಸ್ಥೆಯವರು ಕೋರಿರುವುದನ್ನು ಪರಿಶೀಲಿಸಿ, ಈ ನಾಲ್ಕು ಸಂಸ್ಥೆಯವರು ಕಳೆದ 10-15 ವರ್ಷಗಳಿಂದ ಸಾಮಾಜಿಕ ಕಾರ್ಯ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿರುವುದಾಗಿ ಈ ಎಲ್ಲಾ ಸಂಸ್ಥೆಗಳು ಸಹಕರ ಇಲಾಖೆ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಣಿಯಾಗಿದ್ದು, ಈ ಸಂಸ್ಥೆಯಲ್ಲಿನ ಆಡಳಿತ ಮಂಡಳಿಯು ಪ.ಜಾತಿಯ ಆಡಳಿತ ಮಂಡಳಿಗೆ ಸೇರಿದೆ ಎಂದು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರು ದಿನಾಂಕ: 17-01-2012ರಂದು ದೃಢೀಕರಣ ಪತ್ರವನ್ನು ನೀಡಿರುತ್ತಾರೆ.

ಮುಂದುವರೆದು, ಪಾಲಿಕೆಯ ಕಲ್ಯಾಣ ಇಲಾಖೆಯ ಶೇ.22.75ರ ಶೈಕ್ಷಣಿಕ ಕಲ್ಯಾಣ ಕಾರ್ಯಕ್ರಮದಡಿ ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದ ಆಡಳಿತ ಮಂಡಳಿ ನಡೆಸುವ ಶಾಲಾ ಸಂಸ್ಥೆಗಳು/ವಿದ್ಯಾರ್ಥಿ ನಿಲಯಗಳಿಗೆ ಅನುದಾನ ನೀಡುವ ಕಾರ್ಯಕ್ರಮವನ್ನು ಆಯೋಜಿಸಿದ್ದು, ಈ ಕಾರ್ಯಕ್ರಮದಡಿ ಮಾರ್ಗಸೂಚಿಗಳ ಪ್ರಕಾರ ಸಮಾಜ ಕಲ್ಯಾಣ ಇಲಾಖೆಯಲ್ಲಿ ಮಾನ್ಯತೆ ಪಡೆದು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶಿಕ್ಷಣ/ವಸತಿ ಸೌಲಭ್ಯ ನೀಡುವ ಉದ್ದೇಶವನ್ನು ಹೊಂದಿ ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳು/ವಸತಿ ಶಾಲೆಗಳನ್ನು ಆರ್ಥಿಕವಾಗಿ ಸದೃಢಗೊಳಿಸಲು ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ನಿವೇಶನ ಹೊಂದಿರುವ ಸಂಸ್ಥೆಗಳಿಗೆ ಕಟ್ಟಡ ನಿರ್ಮಾಣ ಮಾಡಲು ತಗಲುವ ಅಂದಾಜು ವೆಚ್ಚದ ಶೇ.75ರಷ್ಟು ಅಥವಾ ಗರಿಷ್ಠ ರೂ.10.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲು ಮಾರ್ಗಸೂಚಿಗಳಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ಆದರೆ ಸದರಿ ಸಮುದಾಯದ ಆಡಳಿತ ಮಂಡಳಿಯ ಶಿಕ್ಷಣ ಸಂಸ್ಥೆಗಳು/ವಸತಿ ಶಾಲೆಗಳಿಗೆ ಗಣಕಯಂತ್ರಗಳು ಹಾಗೂ ಪೀಠೋಪಕರಣಗಳನ್ನು ಖರೀದಿಸಲು ಪಾಲಿಕೆಯಿಂದ ಅನುದಾನ ನೀಡುವ ಕುರಿತು ಮಾರ್ಗಸೂಚಿಗಳಲ್ಲಿ ಅವಕಾಶವಿರುವುದಿಲ್ಲ.

ಸದರಿ ಸಂಸ್ಥೆಯವರು ಪ.ಜಾತಿ/ಪ.ಪಂಗಡದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಉಚಿತವಾಗಿ ಗಣಕಯಂತ್ರ ತರಬೇತಿಯನ್ನು ನೀಡಲು ಉದ್ದೇಶಿಸಿರುವುದನ್ನು ವಿಶೇಷ ಪ್ರಕರಣದಡಿ ಪರಿಗಣಿಸಿ ಗಣಕಯಂತ್ರಗಳನ್ನು ನೀಡಲು ಕೋರಿರುವುದನ್ನು ಪುನರ್ ಪರಿಶೀಲಿಸಿ, ಮಾತಂಗ ಪರಿವಾರ ಮಹಿಳಾ ಸೇವಾ ಸಮಾಜ (ರಿ)., ನಂ: 53, ಕಸ್ತೂರಿ ಬಾ ನಗರ,

ಪೈಪ್ ಲೈನ್ ರಸ್ತೆ, ಬಿಎಂಪಿ ಲೇಔಟ್, ಮೈಸೂರು ರಸ್ತೆ, ಬೆಂಗಳೂರು–560 026 ಮತ್ತು ಜಾಂಬವತಿ ಮಹಿಳಾ ಸ್ವ–ಸಹಾಯ ಸಂಘ(ರಿ)., ನಂ: 222, 11ನೇ ಕ್ರಾಸ್, ವಿ.ಎಸ್.ಗಾರ್ಡನ್, ಜೆ.ಜೆ.ಆರ್.ನಗರ, ಬೆಂಗಳೂರು–560 026. ಈ ಎರಡು ಸಂಸ್ಥೆಯವರು ಆರೋಗ್ಯ ಶಿಬಿರ, ಮಹಿಳಾ ಸಬಲೀಕರಣ ಸಾಮಾಜಿಕ ಸಮಾಜ ಪರಿವರ್ತನೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಈ ಸಂಸ್ಥೆಯಿಂದ ಗಣಕಯಂತ್ರ ತರಬೇತಿ ನೀಡುವುದರಲ್ಲಿ ಶಕ್ತರಾಗಿರುವುದಿಲ್ಲ ಎಂದು ಅಭಿಪ್ರಯಿಸಲಾಗಿದೆ. ಉಳಿದ ಎರಡು ಸಂಸ್ಥೆಯ ವಿಳಾಸವು ಒಂದೇ ಆಗಿದ್ದು, ಆಡಳಿತ ಮಂಡಳಿಯು ಒಂದೇ ಆಗಿರುವುದನ್ನು ಗಮನಿಸಲಾಗಿ ಸದರಿ ಎರಡು ಸಂಸ್ಥೆಯವರು 45 ಗಣಕಯಂತ್ರಗಳನ್ನು ಒದಗಿಸಲು ಕೋರಿರುವ ಮನವಿಯನ್ನು ಪರಿಗಣಿಸಿ ಶೇ.22.75ರ ಶೈಕ್ಷಣಿಕ ಕಲ್ಯಾಣ ಕಾರ್ಯಕ್ರಮದಡಿ ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದ ಆಡಳಿತ ಮಂಡಳಿ ನಡೆಸುವ ಶಾಲಾ ಸಂಸ್ಥೆಗಳು/ವಿದ್ಯಾರ್ಥಿ ನಿಲಯಗಳಿಗೆ ಅನುದಾನ ನೀಡುವ ಶಿರ್ಷಿಕೆಯಲ್ಲಿ ಈ ಕೆಳಕಂಡಂತೆ ಗಣಕಯಂತ್ರಗಳನ್ನು ಒದಗಿಸಬಹುದಾಗಿದೆ.

| ಕ್ರ.ಸಂ | ಸಂಸ್ಥೆಯ ಹೆಸರು | ಸಂಸ್ಥೆಯವರು ಕೋರಿರುವ ಗಣಕಯಂತ್ರಗಳ ಸಂಖ್ಯೆ | ಮಂಜೂರು ಮಾಡಬಹುದಾದ ಗಣಕಯಂತ್ರಗಳ ಸಂಖ್ಯೆ |
|---|---|---|---|
| 1. | ಗೌತಮ ಬುದ್ಧ ಐಟಿಐ., ನಂ: 109, 1ನೇ ಮೈನ್, 7ನೇ ಕ್ರಾಸ್, ಚಾಮರಾಜಪೇಟೆ, ಬೆಂಗಳೂರು–560 018. | 25 | 15 |
| 2. | ವೈಸ್ ಇನ್‌ಪೋಟೆಕ್ ಸರ್ವೀಸ್, ನಂ: 109, 1ನೇ ಮೈನ್, 7ನೇ ಕ್ರಾಸ್, ಚಾಮರಾಜಪೇಟೆ, ಬೆಂಗಳೂರು–560 018. | 20 | 10 |

ಮುಂದುವರೆದು, ಮೇಲ್ಕಂಡ ಸಂಸ್ಥೆಯವರು ಕೋರಿರುವ ಗಣಕಯಂತ್ರಗಳಿಗೆ ತಗಲುವ ವೆಚ್ಚ ದ ವಿವರಗಳನ್ನು ಪ್ರತಿಷ್ಠಿತ ಸಂಸ್ಥೆಯವರಿಂದ ಪಡೆಯಲಾಗಿದ್ದು, ಈ ಕೆಳಕಂಡಂತೆ ಸಾಮಾಗ್ರಿಗಳಿಗೆ ಅಂದಾಜು ವೆಚ್ಚ ವ್ಯಯ ವಾಗಲಿದೆ.

| ಕ್ರ. ಸಂ | ಸಾಮಾಗ್ರಿ ವಿವರ | ಪರಿಮಾಣ ಒಂದಕ್ಕೆ | ಪರಿಮಾಣ | ಒಟ್ಟು ಅಂದಾಜು ಮೊತ್ತ (ಎಲ್ಲಾ ತೆರಿಗೆಗಳು ಸೇರಿ) |
|---|---|---|---|---|
| 1 | ಗಣಕಯಂತ್ರ(ಡ್ಯೂಯಲ್ ಕೋರ್) | 24,800–00 | 25 | 6,20,000–00 |
| | | | **ಒಟ್ಟು ರೂ.** | **6,20,000–00** |

ಮೇಲ್ಕಂಡಂತೆ ವಿವರಿಸಿರುವ ಗಣಕಯಂತ್ರಗಳಿಗೆ ತಗಲುವ ಅಂದಾಜು ವೆಚ್ಚವನ್ನು ಪ್ರಸಕ್ತ ಸಾಲಿನ ಆಯ–ವ್ಯಯ ಲೆಕ್ಕ ಶೀರ್ಷಿಕೆ ಶೇ.22.75ರ ಶೈಕ್ಷಣಿಕ ಕಲ್ಯಾಣ ಕಾರ್ಯಕ್ರಮದಡಿ ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದ ಆಡಳಿತ ಮಂಡಳಿ ನಡೆಸುವ ಶಾಲಾ ಸಂಸ್ಥೆಗಳು/ವಿದ್ಯಾರ್ಥಿ ನಿಲಯಗಳಿಗೆ ಅನುದಾನ ಎಂಬ ಉಪ ಶೀರ್ಷಿಕೆಯಲ್ಲಿ ನೂತನ ಕಾರ್ಯಕ್ರಮವನ್ನಾಗಿ ಅಳವಡಿಸಿಕೊಂಡು ಸದರಿ ಸಂಸ್ಥೆಯವರು ಕೋರಿರುವಂತೆ ಗಣಕಯಂತ್ರಗಳನ್ನು ಒದಗಿಸಲು ತಗಲುವ ವೆಚ್ಚವನ್ನು ಭರಿಸಬಹುದಾಗಿದೆ.

ಈ ಅಂಶಗಳ ಹಿನ್ನಲೆಯಲ್ಲಿ ಮೇಲ್ಕಂಡಂತೆ ಮನವಿ ಸಲ್ಲಿಸಿರುವ ಸಂಸ್ಥೆಯವರು ಕೋರಿರುವಂತೆ ಗಣಕಯಂತ್ರಗಳನ್ನು ಒದಗಿಸಲು ತಗಲುವ ವೆಚ್ಚ ವನ್ನು 2011–12ನೇ ಸಾಲಿನ ಆಯ–ವ್ಯಯದಲ್ಲಿ ಅಳವಡಿಸಿಕೊಂಡು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಬಗ್ಗೆ ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ 08.03.2012ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಿದೆ.

## 8. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 352/11–12:

ವಿಶೇಷ ಆಯುಕ್ತರ ದಿನಾಂಕ: 14.03.12ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶ್ಚಿಮ ವಲಯಕ್ಕೆ ಸಂಬಂಧಿಸಿದಂತೆ ಅಧ್ಯಕ್ಷರು, ಅಪೆರಲ್ ಎಕ್ಸ್‌ಪೋರ್ಟ್ ಪ್ರಮೋಷನ್ ಕೌನ್ಸಿಲ್, ನಂ: ಎ–223,

ಓಕ್ಲ ಇಂಡಸ್ಟ್ರಿಯಲ್ ಏರಿಯಾ, ಪೇಸ್-1, ನವದೆಹಲಿ. ರವರು ಮನವಿ ಸಲ್ಲಿಸಿ, ಪಾಲಿಕೆಯ ಸಹಯೋಗದೊಂದಿಗೆ ಮಲ್ಲೇಶ್ವರಂನಲ್ಲಿ ಅಪೇರಲ್ ಟ್ರೈನಿಂಗ್ ತರಬೇತಿ ಕೇಂದ್ರವನ್ನು ನವಂಬರ್-2010 ರಿಂದ ನಡೆಸಲಾಗುತ್ತಿದ್ದು, ನವಂಬರ್-2010 ರಿಂದ ತಹಲ್‌ವರೆಗೂ ಈ ಕೇಂದ್ರದಲ್ಲಿ 274 ಮಂದಿ ಅಪೇರಲ್ ಟ್ರೈನಿಂಗ್ ಪಡೆದಿದ್ದು, ಇವರುಗಳ ಪೈಕಿ ಪಾಲಿಕೆಯ ವತಿಯಿಂದ ತರಬೇತಿ ಪಡೆದ 157 ಮಂದಿ ಅಭ್ಯರ್ಥಿಗಳಲ್ಲಿ 89 ಅಭ್ಯರ್ಥಿಗಳ ತರಬೇತಿ ಶುಲ್ಕ ಪಾವತಿಸಿದ್ದು, ಉಳಿದ 68 ಅಭ್ಯರ್ಥಿಗಳ ತರಬೇತಿ ಶುಲ್ಕ ತಲಾ ರೂ.3000/-ಗಳಂತೆ ರೂ.2.04 ಲಕ್ಷ ತರಬೇತಿ ಶುಲ್ಕ ಹಾಗೂ ಒಡಂಬಡಿಕೆ ಷರತ್ತಿನ್ವಯ ವಾರ್ಷಿಕ ನಿರ್ವಹಣೆ ವೆಚ್ಚ ರೂ.5.50 ಲಕ್ಷ ಸೇರಿ ಒಟ್ಟು ರೂ.7.54 ಲಕ್ಷಗಳ ಮೊತ್ತವನ್ನು ಪಾವತಿಸಲು ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ, ಜಂಟಿ ಆಯುಕ್ತರು(ಕಲ್ಯಾಣ) ರವರ ಪತ್ರದ ಸಂಖ್ಯೆ: ಕ.ಆ/ಸಿ2/ಪಿಆರ್/768/09-10, ದಿನಾಂಕ: 05-08-2009 ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಎಇಪಿಸಿ ರೂರಲ್ ಡೆವಲಪ್‌ಮೆಂಟ್ ಅಂಡ್ ಲೇಬರ್ ವೆಲ್‌ಫೇರ್ ಪೌಂಡೇಷನ್ ಸಹಯೋಗದೊಂದಿಗೆ ಸಿದ್ಧ ಉಡುಪು ತರಬೇತಿ ಕೇಂದ್ರವನ್ನು ತೆರೆಯಲು ಸೂಚಿಸಿದಂತೆ ಸದರಿ ಸಂಸ್ಥೆಯವರೊಂದಿಗೆ ದಿನಾಂಕ:5/11/2009 ರಂದು ಒಡಂಬಡಿಕೆ ಮಾಡಿಕೊಳ್ಳಲಾಗಿದ್ದು, ಸದರಿ ಒಡಂಬಡಿಕೆಯ ನಿಬಂಧನೆ 14 ರಲ್ಲಿ ತರಬೇತಿಗೆ ಪ್ರಾಯೋಜಿಸುವ ಅಭ್ಯರ್ಥಿಗಳ ಸಂಖ್ಯೆ ಕಡಿಮೆ ಇದ್ದಲ್ಲಿ, 3 ವರ್ಷಗಳ ಅವಧಿಯವರೆಗೆ ತರಬೇತಿ ಕೇಂದ್ರದ ನಿರ್ವಹಣೆಗಾಗಿ ಪ್ರತಿ ವರ್ಷ ರೂ.5.50 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಷರತ್ತು ವಿಧಿಸಿರುವಂತೆ ಈಗಾಗಲೇ ತರಬೇತಿ ಕೇಂದ್ರ ಪ್ರಾರಂಭವಾಗಿ ಒಂದು ವರ್ಷ ಪೂರ್ಣಗೊಂಡಿರುವುದರಿಂದ ವಾರ್ಷಿಕ 600 ಅಭ್ಯರ್ಥಿಗಳ ಪೈಕಿ 157 ಅಭ್ಯರ್ಥಿಗಳನ್ನು ಮಾತ್ರ ಪ್ರಾಯೋಜಿಸಲಾಗಿದ್ದು ಕನಿಷ್ಠ ಗುರಿ ಸಾಧನೆಯಾಗದೆ ಇರುವುದರಿಂದ ವಾರ್ಷಿಕ ನಿರ್ವಹಣೆ ವೆಚ್ಚ ರೂ.5.50 ಲಕ್ಷಗಳ ಅನುದಾನವನ್ನು ಮಂಜೂರು ಮಾಡಬಹುದಾಗಿದೆ.

ಮುಂದುವರೆದು, ಪಾಲಿಕೆಯಿಂದ ಪ್ರಯೋಜಿಸಲಾದ 157 ಮಂದಿ ಅಭ್ಯರ್ಥಿಗಳ ಪೈಕಿ 89 ಮಂದಿ ಪಶ್ಚಿಮ ವಲಯದ ಗೌರವ ವೇತನ ಶಿಕ್ಷಕರು ತರಬೇತಿ ಪಡೆದಿದ್ದು, ಇವರಿಗೆ ತಲಾ ರೂ.3000/-ಗಳಂತೆ ತರಬೇತಿ ಶುಲ್ಕ ಒಟ್ಟು ರೂ.2.67 ಲಕ್ಷಗಳನ್ನು ಈಗಾಗಲೇ ಸಂಸ್ಥೆಯವರಿಗೆ ಪಾವತಿಸಲಾಗಿದ್ದು, ಉಳಿದ 68 ಮಂದಿ ಅಭ್ಯರ್ಥಿಗಳ ತರಬೇತಿ ಶುಲ್ಕ ರೂ.2.04 ಲಕ್ಷಗಳನ್ನು ಎಇಪಿಸಿ ಸಂಸ್ಥೆಗೆ ಪಾವತಿಸಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಎಇಪಿಸಿ ಸಂಸ್ಥೆಯಲ್ಲಿ ಸಿದ್ಧ ಉಡುಪು ತರಬೇತಿ ಪಡೆದ 68 ಮಂದಿ ಅಭ್ಯರ್ಥಿಗಳ ತರಬೇತಿ ಶುಲ್ಕ ರೂ.2.04 ಲಕ್ಷ ಹಾಗೂ ವಾರ್ಷಿಕ ನಿರ್ವಹಣೆ ವೆಚ್ಚ ರೂ.5.50 ಲಕ್ಷ ಒಟ್ಟು ರೂ.7.54 ಲಕ್ಷಗಳನ್ನು 2011-2012ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳ ಕ್ರಿಯಾ ಯೋಜನೆ ಅನುಮೋದನೆಯಾಗಿಲ್ಲದ ಕಾರಣ ಸದರಿ ಸಾಲಿನ ಕ್ರಿಯಾ ಯೋಜನೆ ಅನುಮೋದನೆ ನಿರೀಕ್ಷಿಸಿ ಮಹಿಳಾ

ಕಲ್ಯಾಣ ಕಾರ್ಯಕ್ರಮದಡಿ ಅಪೇರಲ್ ಟ್ರೈನಿಂಗ್ ಮತ್ತು ಡಿಸೈನ್ ಸೆಂಟರ್ ಕೇಂದ್ರ ಪ್ರಾರಂಭಿಸಲು ಲೆಕ್ಕ ಶೀರ್ಷಿಕೆಯಡಿ ನಿಗಧಿಪಡಿಸುವ ಅನುದಾನದಲ್ಲಿ ಎ.ಇ.ಪಿ.ಸಿ ರೂರಲ್ ಡೆವಲಪ್‌ಮೆಂಟ್ ಅಂಡ್ ಲೇಬರ್ ವೆಲ್‌ಫೇರ್ ಪೌಂಡೇಷನ್ ಸಂಸ್ಥೆಯು ಮರು ನಾಮಾಂಕಿತ ಹೊಂದಿದ ಎಇಪಿಸಿ ಸಂಸ್ಥೆಯವರಿಗೆ ಪಾವತಿಸಲು ಅನುಮೋದನೆಗಾಗಿ ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ 14.03.2012ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಲಾಯಿತು.

## 9. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 353/11-12:

ವಿಶೇಷ ಆಯುಕ್ತರ ದಿನಾಂಕ: 16.03.12ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಯಲಹಂಕ ಉಪನಗರದಲ್ಲಿ 2009-10ನೇ ಸಾಲಿನಲ್ಲಿ ಶೇಕಡ 22.75ರಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭವನವನ್ನು ನಿರ್ಮಾಣ ಮಾಡಲು ▫.399.50 ಲಕ್ಷಗಳಿಗೆ ಅನುದಾನ ಒದಗಿಸಲಾಗಿದ್ದು, ಈಗ ಕಟ್ಟಡದ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿದ್ದು, ಸದರಿ ಕಟ್ಟಡದ ಒಳಾಂಗಣವನ್ನು ಆಧುನಿಕ ಸೌಲಭ್ಯಗಳೊಂದಿಗೆ ವಿನ್ಯಾಸಗೊಳಿಸುವ ಸಂಬಂಧ ▫.430.00 ಲಕ್ಷಗಳಿಗೆ ಅನುಮೋದನೆ ನೀಡುವ ಸಂಬಂಧ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ನಡವಳಿ ವಿಷಯದ ಸಂಖ್ಯೆ:ಸಾನ್ಯಾಸ್ಥಾಸ 48/11-12 ದಿನಾಂಕ 04.06.2011ರಲ್ಲಿ ನಿರ್ಣಯ ಮಾಡಲಾಗಿರುತ್ತದೆ.

ದಿನಾಂಕ 15.02.2012ರಂದು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯಲ್ಲಿ ನಡೆದ ಸಭೆಯ ನಡವಳಿ ವಿಷಯದ ಸಂಖ್ಯೆ: :ಸಾನ್ಯಾಸ್ಥಾಸ 308/11-12 ರ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಕಲ್ಯಾಣ ಯೋಜನೆಗಳ ಶೇಕಡ 22.75ರ ಅನುದಾನದ ಹಾಗೂ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಕರ್ಯಕ್ರಮಗಳ ಅನುದಾನದ ಕ್ರಿಯಾ ಯೋಜನೆಯ ಅನುಬಂಧ-2ರಲ್ಲಿ

ಪುಟ 16ರ ಕ್ರಮಸಂಖ್ಯೆ 26 ರಲ್ಲಿ ಮೇಲ್ಕಂಡ ಕಾಮಗಾರಿಯನ್ನು 2012–13ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಸೇರಿಸಿಕೊಂಡು ಕ್ರಮ ವಹಿಸಲು ನಿರ್ಣಯವಾಗಿರುತ್ತದೆ.

ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ವೆಚ್ಚಗಳ ಪಟ್ಟಿಯಲ್ಲಿ ಮಾರ್ಚ್ 16ನೇ ದಿನಾಂಕದವರೆಗೂ ಶೇಕಡ 22.75ರ ಅನುದಾನದ ಅಡಿಯಲ್ಲಿ ಆಗಿರುವ ವೆಚ್ಚದ ಮಾಹಿತಿಯನ್ನು ಎಫ್–ಬಾಸ್ ನಲ್ಲಿ ಪಡೆದುಕೊಂಡಿದ್ದು, ದಿನಾಂಕ 16.03.2012ರವರೆಗೆ ᄆ.11,461.10 ಲಕ್ಷಗಳು ಖರ್ಚಾಗಿರುತ್ತದೆ, 2011–12ರ ಕ್ರಿಯಾ ಯೋಜನೆಗೆ ಒಟ್ಟು ᄆ.215.00 (ಶೇ.22.75)ಕೋಟಿಗಳು ಕ್ರಿಯಾ ಯೋಜನೆ ತಯಾರಿಸಿ ರೂಪಿಸಲು ಮಾನ್ಯ ಆಯುಕ್ತರು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಗೆ ಟಿಪ್ಪಣಿ ಮಂಡಿಸಿದ್ದು, ಅಂದರೆ ಇದುವರೆವಿಗೂ ᄆ.114.611 ಕೋಟಿಗಳು ವೆಚ್ಚವಾಗಿರುವುದರಿಂದ 2011–12ನೇ ಸಾಲಿನಲ್ಲಿ ᄆ.100.389 ಕೋಟಿಗಳು ಉಳಿಕೆಯಾಗಿರುತ್ತದೆ.

ಆದುದರಿಂದ ಮೇಲ್ಕಂಡಂತೆ ಶೇಕಡ 22.75ರಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭವನದ ಕಟ್ಟಡದ ಒಳಾಂಗಣವನ್ನು ಆಧುನಿಕ ಸೌಲಭ್ಯಗಳೊಂದಿಗೆ ವಿನ್ಯಾಸಗೊಳಿಸುವ ಸಂಬಂಧ ಮೇಲ್ಕಂಡ ಉಳಿಕೆಯಾಗಿರುವ ಮೊತ್ತದಲ್ಲಿ ᄆ.430.00 ಲಕ್ಷಗಳನ್ನು 2011–12ನೇ ಸಾಲಿನಲ್ಲಿ ಸದರಿ ಕಾಮಗಾರಿಗೆ ಅನುದಾನವನ್ನು ನೀಡಿ ಜಾಬ್ ಕೋಡ್ ನೀಡಲು ಅನುಮೋದನೆಗಾಗಿ ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**<u>ನಿರ್ಣಯ:</u>** ದಿನಾಂಕ 16.03.2012ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಲಾಯಿತು.

## 10. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 354/11–12:

ವಿಶೇಷ ಆಯುಕ್ತರ ದಿನಾಂಕ: 17.03.12ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂರ್ವ ವಲಯಕ್ಕೆ ಸಂಬಂಧಿಸಿದಂತೆ ವಾರ್ಡ್ ಸಂಖ್ಯೆ 61ರ ಎಸ್.ಕೆ.ಗಾಡನ್ ವ್ಯಾಪ್ತಿಗೆ ಬರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಹಾಗೂ ಹಿಂದುಳಿದ ವರ್ಗದ ಬಡಜನರು ವಾಸಿಸುತ್ತಿದ್ದು, ಸದರಿ ಪ್ರದೇಶಗಳಲ್ಲಿ ದಿನಾಂಕ 22.04.2011 ರಂದು ಸುರಿದ ಭಾರಿ ಮಳೆಯಿಂದಾಗಿ ಮನೆಗಳು ಕುಸಿದು ಬಿದ್ದಿದ್ದು, ಹಲವು ಮನೆಗಳಿಗೆ ನೀರು ನುಗ್ಗಿ ಹಾಗೂ ರಸ್ತೆಗಳಲ್ಲಿ ಹರಿದು ಓಡಾಡಲು ತುಂಬಾ ತೊಂದರೆಯಾಗುತ್ತಿರುತ್ತದೆ. ಸದರಿ ಕಾಮಗಾರಿಗಳು ನಿರ್ವಹಿಸುವುದು ತುರ್ತಾಗಿರುವುದರಿಂದ ಶೇಕಡ 22.75ರ ಅನುದಾನದಡಿಯಲ್ಲಿ ಕೈಗೆತ್ತಿಕೊಳ್ಳಲು ವಾರ್ಡ್ ಸದಸ್ಯರು ದಿನಾಂಕ 08.07.2011 ರಂದು ಪತ್ರ ಮುಖೇನ ಕೋರಿರುತ್ತಾರೆ.

ಸದರಿ ಕಾಮಗಾರಿಗಳು ಸಾರ್ವಜನಿಕರ ಹಿತದೃಷ್ಟಿಯಿಂದ ಅತ್ಯವಶ್ಯಕವಾಗಿರುತ್ತದೆ. ಆದ್ದರಿಂದ ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ರವರು ಕೆಳಕಂಡ 13 ಕಾಮಗಾರಿಗಳಿಗೆ ᄆ.196.56 ಲಕ್ಷಗಳ ಅಂದಾಜು ಮೊತ್ತಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

| ಕ್ರ. ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ᄆ.ಲಕ್ಷಗಳಲ್ಲಿ) |
|---|---|---|
| 1 | Providing RCC Drains at Gandhi Grama | 19.99 |
| 2 | Providing RCC Drains at Cross Roads of Gandhi Grama | 17.55 |
| 3 | Providing RCC Drains at Cross Roads of Madina Mohalla | 19.99 |
| 4 | Providing RCC Drains at Joseph Garden | 19.60 |
| 5 | Providing RCC Drains at Right side of Sonnappa Garden | 19.80 |
| 6 | Providing RCC Drains at Left side of Sonnappa Garden | 19.70 |
| 7 | Providing RCC Drains at Modi main road (Near Tippu Circle) | 19.95 |
| 8 | Providing Concrete roads at Madina near Jamiya Ashrafiya School in D.J.Halli, S.K.Garden | 10.00 |
| 9 | Providing Concrete roads at 4th,3rd & 2nd Cross roads of Modi main road in D.J.Halli , S.K.Garden | 10.00 |
| 10 | Providing Concrete roads at 7th, 6th & 5th Cross roads of Modi main road in D.J.Halli , S.K.Garden | 10.00 |
| 11 | Providing Concrete roads for cross roadsS.K.Garden | 10.00 |
| 12 | Providing Concrete roads at S.K.Garden in D.J.Halli, | 10.00 |

| | | |
|---|---|---|
| 13 | Providing Concrete roads at 4th,5th & 7th Cross of Bangargiri Layout in D.J.Halli , S.K.Garden | 9.98 |
| | **Total** | **196.56** |

ಮೇಲ್ಕಂಡ 13 ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ ¤.196.56 ಲಕ್ಷಗಳನ್ನು ಶೇಕಡ 22.75ರ ಅನುದಾನದಡಿಯಲ್ಲಿ ಕೈಗೊಳ್ಳಲು ಅನುಮೋದನೆಗಾಗಿ ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ 17.03.2012ರ ವಿಶೇಷ ಆಯುಕ್ತರ ಟಿಪ್ಪಣಿ ಒಪ್ಪಲಾಯಿತು.

## 11. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 355/11–12:

ವಿಶೇಷ ಆಯುಕ್ತರ ದಿನಾಂಕ: 17.03.12ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ 04.06.2011ರ ಸಭೆಯ ನಡವಳಿಗಳಲ್ಲಿನ ವಿಷಯದ ಸಂಖ್ಯೆ ಸಾನ್ಯಾಸ್ಥಾಸ/41/2010–11 ವಾರ್ಡ್ ಸಂಖ್ಯೆ 79ರಲ್ಲಿ ಕಾರ್ಪೊರೇಷನ್ ಕಾಲೋನಿ, ಮರ್ಫಿಟೌನ್ ಇಲ್ಲಿ ವಾಸಿಸುತ್ತಿರುವ 84 ಪೌರಕಾರ್ಮಿಕರಿಗೆ ಮನೆ ನಿರ್ಮಾಣ ಕಾಮಗಾರಿಗಳಿಗೆ ¤.252.00 ಲಕ್ಷಗಳ ಅನುದಾನವನ್ನು ಒದಗಿಸಲು ತೀರ್ಮಾನವಾಗಿರುತ್ತದೆ.

ಆದರೆ, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ 15.02.2012ರಂದು ನಡೆದ ಸಭೆಯ ನಡವಳಿಗಳಲ್ಲಿನ ವಿಷಯದ ಸಂಖ್ಯೆ ಸಾನ್ಯಾಸ್ಥಾಸ/308/2011–12ರಲ್ಲಿ 2011–12ನೇ ಸಾಲಿನ ಶೇ.22.75ರಡಿ ಅನುಮೋದಿತ ಕಾಮಗಾರಿಗಳ ಪಟ್ಟಿಯಲ್ಲಿ ಸದರಿ ಕಾಮಗಾರಿಗಳು ಸೇರ್ಪಡೆಯಾಗಿರುವುದಿಲ್ಲ.

ಸದರಿ 84 ಮನೆ ನಿರ್ಮಾಣ ಕಾಮಗಾರಿಗಳು ಈಗಾಗಲೇ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯಲ್ಲಿ ಅನುಮೋದನೆಗೊಂಡಿರುವುದರಿಂದ 2011–12ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಅನುಮೋದನೆಗಾಗಿ ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ 17.03.2012ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಿದೆ.

## 12. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 356/11–12:

ವಿಶೇಷ ಆಯುಕ್ತರ ದಿನಾಂಕ: 17.03.12ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ರಾಜರಾಜೇಶ್ವರಿನಗರ ವಲಯಕ್ಕೆ ಸಂಬಂಧಿಸಿದಂತೆ ಕಲ್ಯಾಣ ಶಾಖೆಯಿಂದ ಹೊಸದಾಗಿ ಪ್ರಾರಂಭಿಸಿರುವ ಉಚಿತ ತರಬೇತಿ ಕೇಂದ್ರ ವಾರ್ಡ್ ನಂ.73, ನಂ.37, 5ನೇ ಅಡ್ಡರಸ್ತೆ, ಕೊಟ್ಟಿಗೆಪಾಳ್ಯ, ಶ್ರೀಗಂಧದ ಕಾವಲು, ನಾಗರಭಾವಿ, ಬೆಂಗಳೂರು ಶ್ರೀ ಮಾರುತಿ ಇವರು ತಮ್ಮ ಕಟ್ಟಡವನ್ನು ಬಾಡಿಗೆಗೆ ನೀಡಿದ್ದು, ಪಾಲಿಕೆಯ ಸ್ವಂತ ಕಟ್ಟಡ ಇರುವುದಿಲ್ಲ ಈ ಸಂಬಂಧ ಖಾಸಗಿ ಕಟ್ಟಡಕ್ಕೆ ಬಾಡಿಗೆ ನಿಗಧಿಪಡಿಸುವ ಸಂಬಂಧ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲಗ್ಗೆರೆ ಉಪವಿಭಾಗ ರವರಿಗೆ ಕಡತ ಮಂಡಿಸಲಾಗಿದೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಬಾಡಿಗೆ ನಿಗಧಿಪಡಿಸಲು ಕಾರ್ಯಪಾಲಕ ಅಭಿಯಂತರರು ರಸ್ತೆ ಮತ್ತು ಕಟ್ಟಡಗಳ ವಿಶೇಷ ವಿಭಾಗ, ಕೆ.ಆರ್.ವೃತ್ತ, ಬೆಂಗಳೂರು ರವರಿಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಪತ್ರ ಬರೆದಿರುತ್ತಾರೆ. ಪತ್ರದ ಸಂಖ್ಯೆ:ಸಕಾಅ.ಉಉವಿ/ಪಿಆರ್/223/11–12 ದಿನಾಂಕ 30.12.2011 ರಂತೆ ಸದರಿ ಕಟ್ಟಡಕ್ಕೆ ಸಂಖ್ಯೆ:ಕಂಇ/ವಿವರ ಮತ್ತು ಕೆ/ಬೆಂ/ಬಾಡಿಗೆ ನಿಗಧಿ/92/2011–12 ಮಾಸಿಕ ¤.9,062.00 ಗಳನ್ನು ನಿಗಧಿಪಡಿಸಲಾಗಿದ್ದು, ದಿನಾಂಕ 12.08.2011 ರಿಂದ ದಿನಾಂಕ 12.02.2012 ರವರೆಗೆ ಒಟ್ಟು 6 ತಿಂಗಡ ಬಾಡಿಗೆಯನ್ನು ನೀಡಬೇಕಾಗಿದ್ದು, ತಿಂಗಳಿಗೆ ¤.9062*6=54,372.00 (¤.ಐವತ್ತ ನಾಲ್ಕು ಸಾವಿರದ ಮುನ್ನೂರ ಎಪ್ಪತ್ತೆರಡು ಮತ್ರ) ಮಹಿಳಾ ಕಲ್ಯಾಣ ಯೋಜನೆಯಡಿ ನೀಡಬಹುದಾಗಿದ್ದು.

ಮೇಲ್ಕಂಡ ವಿಷಯವನ್ನು ಸಮಿತಿಯ ಅನುಮೋದನೆಗಾಗಿ ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ 17.03.2012ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಲಾಯಿತು.

## 13. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 357/11-12:

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 16.03.12ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ರಾಜರಾಜೇಶ್ವರಿನಗರ ವಲಯಕ್ಕೆ ಸಂಬಂಧಿಸಿದಂತೆ ವಾರ್ಡ್ ಸಂಖ್ಯೆ-129ರ ಮಹಾನಗರ ಪಾಲಿಕೆ ಸದಸ್ಯರು ತಾವು ಪ್ರತಿನಿಧಿಸುವ ವಾರ್ಡ್ ಸಂಖ್ಯೆ-129ರ ವ್ಯಾಪ್ತಿಯಲ್ಲಿನ ಹನುಮಂತರಾಯನಪಾಳ್ಯ, ಕೆಬ್ಬೆಹಳ್ಳ ಕಾಲೋನಿ, ಪಾಪರೆಡ್ಡಿಪಾಳ್ಯ ಕಾಲೋನಿ, ಕೆಂಗುಂಟೆ ಕಾಲೋನಿ, ವೀರನಪಾಳ್ಯ ಕಾಲೋನಿ, ಮಲ್ಲತ್ತಹಳ್ಳಿ ಕಾಲೋನಿ, ಮುತ್ತುರಾಯನಗರ ಕಾಲೋನಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ / ಪಂಗಡದ ತುಂಬ ಕಡುಬಡತನ/ಆರ್ಥಿಕವಾಗಿ ದುರ್ಬಲವಾಗಿರುವ ವಸತಿರಹಿತರಿಗೆ ಶೇ.22.75ರ ಅನುದಾನದಡಿ ವೈಯುಕ್ತಿಕ ಮನೆ ನಿರ್ಮಾಣ ಮಾಡಿಕೊಡಲು ಕೋರಿರುತ್ತಾರೆ.

ಮಾನ್ಯ ಸಚಿವರು ಕರ್ನಾಟಕ ಸರ್ಕಾರ, ಮಾನ್ಯ ಉಪ ಮಹಾಪೌರರು, ಬಿ.ಬಿ.ಎಂ.ಪಿ. ಮಾನ್ಯ ಸ್ಥಳೀಯ ಶಾಸಕರು, ಮಾನ್ಯ ವಿರೋದ ಪಕ್ಷದ ನಾಯಕರು (ಜಾತ್ಯಾತೀತ ಜನತಾದಳ) ಬಿ.ಬಿ.ಎಂ.ಪಿ. ಮತ್ತು ಪಾಲಿಕೆ ಸದಸ್ಯರು ಶಿಫಾರಸ್ಸು ಪತ್ರ ನೀಡಿ ಪರಿಶಿಷ್ಟ ಜಾತಿ / ಪಂಗಡದವರಿಗೆ ಶೇ.22.75 ಅರ ಅನುದಾನದಡಿ ಮನೆಗಳನ್ನು ಮಂಜೂರು ಮಾಡಲು ಸೂಚಿಸಿರುತ್ತಾರೆ. ಅಧ್ದರಿಂದ ವೈಯುಕ್ತಿಕ ಮನೆ ನಿರ್ಮಾಣಕ್ಕೆ ಹೆಚ್ಚಿನ ಬೇಡಿಕೆ ಇರುವುದರಿಂದ ಒಟ್ಟು 77 ವೈಯುಕ್ತಿಕ ಮನೆ ನಿರ್ಮಾಣಕ್ಕೆ ▫.231.00 ಲಕ್ಷಗಳನ್ನು 2011-12ನೇ ಸಾಲಿನ ಶೇಕಡ 22.75ರ ಅನುದಾನದಲ್ಲಿ ಜಾಬ್ ಸಂಖ್ಯೆ ಪಡೆದು ಕಾಮಗಾರಿ ಕೈಗೊಳ್ಳಲು ಅನುಮೋದನೆಗಾಗಿ ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

– ಮುಂದೂಡಿದೆ –

## 14. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 358/11-12:

ವಿಶೇಷ ಆಯುಕ್ತರು (ಯೋಜನೆ) ದಿನಾಂಕ: 17.03.12ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ 29.01.2011 ಸಭೆಯ ನಡವಳಿಗಳಲ್ಲಿನ ವಿಷಯದ ಸಂಖ್ಯೆ ಸಾನ್ಯಾಸ್ಥಾಸ/16/2010-11 ವಾರ್ಡ್ ಸಂಖ್ಯೆ 51 ರಲ್ಲಿ ಸಾರ್ವಜನಿಕ ಸಿವಿಲ್ ಕಾಮಗಾರಿಗಳಿಗೆ ಸದರಿ ವಾರ್ಡ್‌ನ ಪಾಲಿಕೆ ಸದಸ್ಯರು ಹಾಗೂ ಆಗಿನ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷರ ಕೋರಿಕೆ ಮೇರೆಗೆ ▫.1080.00 ಲಕ್ಷಗಳ ಅಧಿಕ ಮೊತ್ತದ ಅನುದಾನವನ್ನು ಒದಗಿಸಲು ತೀರ್ಮಾನವಾಗಿರುತ್ತದೆ. ಅದರಂತೆ ಮಾನ್ಯ ಆಯುಕ್ತರವರು 2011-12ನೇ ಸಾಲಿಗೆ ಶೇ.22.75ರಡಿಯಲ್ಲಿ ಕ್ರಿಯಾಯೋಜನೆ ಎಂಬುದಾಗಿ ಪರಿಗಣಿಸಿ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅನುಮೋದಿಸಿರುತ್ತಾರೆ.

ಆದರೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ 15.02.2012ರಂದು ನಡೆದ ಸಭೆಯ ನಡವಳಿಗಳಲ್ಲಿನ ವಿಷಯದ ಸಂಖ್ಯೆ: ಸಾನ್ಯಾಸ್ಥಾಸ/308/2011-12ನೇ ಸಾಲಿನ ಶೇ.22.75ರಡಿ ಅನುಮೋದಿತ ಕಾಮಗಾರಿಗಳ ಪಟ್ಟಿಯಲ್ಲಿ ಸದರಿ ಕಾಮಗಾರಿಗಳು ಸೇರ್ಪಡೆಯಾಗಿರುವುದಿಲ್ಲ.

ಶೇ.22.75ರಡಿ 2011-12ನೇ ಸಾಲಿನ ಕ್ರಿಯಾಯೋಜನೆ ಅನುಮೋದನೆಯ ಸಂದರ್ಭದಲ್ಲಿ ಮುಖ್ಯ ಲೆಕ್ಕಾಧಿಕಾರಿ/ಜಂಟಿ ಆಯುಕ್ತರು (ಕಲ್ಯಾಣ) ರವರ ಕಛೇರಿಗೆ ಸಲ್ಲಿಸದೇ ಸದರಿ ಕಡತವು ಮಹದೇವಪುರ ವಲಯ ಕಛೇರಿಯ ವ್ಯಾಪ್ತಿಯಲ್ಲಿ ಇದ್ದುದ್ದರಿಂದ 2011-12ನೇ ಸಾಲಿನ ಅನುಮೋದಿತ ಕ್ರಿಯಾಯೋಜನೆ ಪಟ್ಟಿಯಲ್ಲಿ ಬಿಟ್ಟುಹೋಗಿರುತ್ತದೆ.

ಸದರಿ 14 ಸಿವಿಲ್ ಕಾಮಗಾರಿಗಳು ಈಗಾಗಲೇ ಸ್ಥಾಯಿ ಸಮಿತಿಯಲ್ಲಿ ಅನುಮೋದನೆಗೊಂಡಿರುವುದರಿಂದ ಹಾಗೂ 2011-12ನೇ ಸಾಲಿಗೆ ಶೇ.22.75ರಡಿಯ ಕ್ರಿಯಾ ಯೋಜನೆ ಎಂದು ಪರಿಗಣಿಸಿ ಅನುಷ್ಠಾನಗೊಳಿಸಲು ಮಾನ್ಯ ಆಯುಕ್ತರು ಸಹ ಅನುಮೋದಿಸಿರುವುದರಿಂದ 2011-12ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಆಳವಡಿಸಿಕೊಳ್ಳುವ ಬಗ್ಗೆ ಅನುಮೋದನೆಗಾಗಿ ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ವಿಶೇಷ ಆಯುಕ್ತರ ಟಿಪ್ಪಣಿ ಒಪ್ಪಲಾಯಿತು.

## 15. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 359/11-12:

ಅಪರ ಆಯುಕ್ತರ ದಿನಾಂಕ: 20.03.12ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಕ್ಷಿಣ ವಲಯಕ್ಕೆ ಸಂಬಂಧಿಸಿದಂತೆ ಬಿ.ಟಿ.ಎಂ.ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಫಲಾನುಭವಿಗಳಿಗೆ 2011–12ನೇ ಸಾಲಿನ ಶೇ.22.75ರ ಅನುದಾನದಡಿಯಲ್ಲಿ ವೈಯುಕ್ತಿಕ ಮನೆಗಳ ನಿರ್ಮಾಣಕ್ಕಾಗಿ ರೂ.300.00 ಲಕ್ಷಗಳ ಮೊತ್ತಕ್ಕೆ 100 ಮನೆಗಳ ನಿರ್ಮಾಣಕ್ಕಾಗಿ ಈ ಕೆಳಕಂಡ ಕಾಮಗಾರಿಗೆ ಶೇಕಡ 22.75ರ ಅನುದಾನದಡಿಯಲ್ಲಿ ಕೈಗೆತ್ತಿಗೊಳ್ಳಲು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸಲು ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರು ಕಂಡಿಕೆ 24ರಲ್ಲಿ ಸೂಚಿಸಿರುವಂತೆ ಹಾಗೂ ಕಂಡಿಕೆ 25ರಲ್ಲಿ ಮಾನ್ಯ ಆಯುಕ್ತರು ರವರು ಅನುಮೋದನೆಯನ್ನು ನೀಡಿರುತ್ತಾರೆ.

ಅದರಂತೆ ಈ ಕೆಳಕಂಡ ಕಾಮಗಾರಿಗೆ ಶೇಕಡ 22.75ರ ಅನುದಾನದಡಿಯಲ್ಲಿ ಆಢಳಿತಾತ್ಮಕ ಅನುಮೋದನೆ ಮತ್ತು ಜಾಬ್ ಕೋಡ್ ನೀಡಲು ಅನುಮೋದನೆ ಕೋರಿ ಕಾರ್ಯಪಾಲಕ ಅಭಿಯಂತರರು (ಬಿ.ಟಿ.ಎಂ.ಲೇಔಟ್) ರವರು ಕಡತವನ್ನು ಸಲ್ಲಿಸಿರುತ್ತಾರೆ.

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | Construction of Individual houses for SC/ST families under 22.75% grant at BTM Constitutency | 300.00 |
| | **Total** | **300.00** |

ಕಾರ್ಯಪಾಲಕ ಅಭಿಯಂತರರು (ಬಿ.ಟಿ.ಎಂ.ಲೇಔಟ್) ವಿಭಾಗರವರು ಸಲ್ಲಿಸಿರುವ ಪ್ರಸ್ತಾವನೆಯಂತೆ ಮೇಲ್ಕಂಡ ಕಾಮಗಾರಿಗೆ ಶೇಕಡ 22.75ರ ಅನುದಾನದಡಿಯಲ್ಲಿ ಆಢಳಿತಾತ್ಮಕ ಅನುಮೋದನೆ ಮತ್ತು ಜಾಬ್ ಕೋಡ್ ನೀಡಲು, ಅನುಮೋದನೆಗಾಗಿ ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** 2011–12ನೇ ಸಾಲಿನಲ್ಲಿರುವ ಅನುದಾನದ ಲಭ್ಯತೆ ಮೇರೆಗೆ ಕಾಮಗಾರಿ ಕೈಗೆತ್ತಿಗೊಳ್ಳಲು ತೀರ್ಮಾನಿಸಲಾಯಿತು.

## 16. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 360 /11–12:

ವಿಶೇಷ ಆಯುಕ್ತರ ದಿನಾಂಕ: 20.03.12ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ರಾಜರಾಜೇಶ್ವರಿನಗರ ವಲಯಕ್ಕೆ ಸಂಬಂಧಿಸಿದಂತೆ ವಾರ್ಡ್ ನಂ.40ರಲ್ಲಿ ಪರಿಶಿಷ್ಟ ಜಾತಿ / ಪಂಗಡದವರಿಗೆ 143 ವೈಯುಕ್ತಿಕ ಮನೆ ನಿರ್ಮಿಸಲು ಉಲ್ಲೇಖ ಪತ್ರದಲ್ಲಿ ವಾರ್ಡ್ ಮಾನ್ಯ ಸದಸ್ಯರಾದ ಶ್ರೀಮತಿ ಟಿ.ಎ.ಗಾಯತ್ರಿ ಜವರಾಯಿಗೌಡರವರು ಕೋರಿರುತ್ತಾರೆ. ಶೇ.22.75ರ ಅನುದಾನದಡಿಯಲ್ಲಿ ರೂ.429.00 ಲಕ್ಷಗಳಿಗೆ ಕಾಮಗಾರಿ ಸಂಖ್ಯೆ ಪಡೆದು ಕಾಮಗಾರಿಯನ್ನು ನಿರ್ವಹಿಸುವ ಬಗ್ಗೆ ಹಾಗೂ ಯಾವ ಆರ್ಥಿಕ ಸಾಲಿನಲ್ಲಿ ಕೈಗೊಳ್ಳಬೇಕೆಂಬ ವಿಷಯದ ಬಗ್ಗೆ ಅನುಮೋದನೆಗಾಗಿ ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ 20.03.2012ರ ವಿಶೇಷ ಆಯುಕ್ತರ ಟಿಪ್ಪಣಿಯಲ್ಲಿ ಹಣ ಲಭ್ಯತೆ ಆಧಾರದ ಮೇರೆಗೆ ಒಪ್ಪಲಾಯಿತು.

## 17. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 361 /11–12:

ಅಪರ ಆಯುಕ್ತರು (ಯೋಜನೆ) ರವರ ದಿನಾಂಕ: 20.03.12ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂರ್ವ ವಲಯಕ್ಕೆ ಸಂಬಂಧಿಸಿದಂತೆ ವಾರ್ಡ್ ನಂ.46ರ ವ್ಯಾಪ್ತಿಯ ಜೆ.ಸಿ.ನಗರ ಪ್ರದೇಶದಲ್ಲಿ ಹಿಂದುಳಿದ ವರ್ಗಗಳ ಕಾರ್ಯಕ್ರಮದ ಕಾಮಗಾರಿಗಳು ಪಿ2340 ಅನುದಾನದಡಿಯಲ್ಲಿ ಫಲಾನುಭವಿಗಳಿಗೆ ವಸತಿ ಮನೆಗಳನ್ನಿ ನಿರ್ಮಿಸಲು ಪಾಲಿಕೆ ಸದಸ್ಯರು ಆದ ಶ್ರೀ ಎನ್.ಗೋವಿಂದರಾಜು ರವರು ಕೋರಿರುತ್ತಾರೆ.

ಅದರಂತೆ, ಸದರಿ ಕಾಮಗಾರಿಯನ್ನು 2011–12ನೇ ಸಾಲಿನ ಹಿಂದುಳಿದ ವರ್ಗಗಳ ಕಾರ್ಯಕ್ರಮದ ಕಾಮಗಾರಿಗಳು ಪಿ2340ರ ಅನುದಾನದಡಿಯಲ್ಲಿ ಕೈಗೊಳ್ಳಲು ಕಾರ್ಯಪಾಲಕ ಅಭಿಯಂತರರು (ಹೆಬ್ಬಾಳ) ಸದರಿ ಕಾಮಗಾರಿಗಳಿಗೆ ರೂ.15.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ. ಸದರಿ ಕಾಮಗಾರಿಗಳ ವಿವರ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | Construction of Individual houses for Economically weaker section of J.C.Nagar Block-1 | 9.00 |
| 2 | Construction of Individual houses for Economically weaker section of J.C.Nagar Block-2 | 6.00 |
| | **Total** | **15.00** |

ಮೇಲ್ಕಂಡ ಕಾಮಗಾರಿಯನ್ನು ಹಿಂದುಳಿದ ವರ್ಗಗಳ ಕಾರ್ಯಕ್ರಮದ ಕಾಮಗಾರಿಗಳು ಪಿ2340ರ ಅನುದಾನದಡಿ ಅನುಮೋದನೆಗಾಗಿ ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ 20.03.2012ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಲಾಯಿತು.

## 18. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 362/11–12:

ವಿಶೇಷ ಆಯುಕ್ತರ ದಿನಾಂಕ: 28.03.12ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ:15–02–2012ರಂದು ನಡೆದ ಸಭೆಯ ನಡವಳಿಗಳಲ್ಲಿನ ವಿಷಯದ ಸಂಖ್ಯೆ:ಸಾನ್ಯಾಸ್ಥಾಸ/308/2011–12ರಲ್ಲಿ 2011–12ನೇ ಸಾಲಿನ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಕಲ್ಯಾಣ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ವಲಯವಾರು ಹಂಚಿಕೆ ಮಾಡಲಾದ ಅನುದಾನಕ್ಕೆ ಕ್ರಿಯಾಯೋಜನೆ ತಯಾರಿಸಿ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ತೀರ್ಮಾನವಾಗಿರುತ್ತದೆ.

2011–12ನೇ ಸಾಲಿನ ಆಯವ್ಯಯದಲ್ಲಿ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು, ಶೈಕ್ಷಣಿಕ ಕಾರ್ಯಕ್ರಮಗಳು ಮತ್ತು ಇತರೆ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ (ಲೆಕ್ಕಶೀರ್ಷಿಕೆ ಪಿ–2020, ಪಿ–2022, ಪಿ–2023) ಒಟ್ಟು ¤.135.00 ಕೋಟಿಗಳನ್ನು ಕಾಯ್ದಿರಿಸಲಾಗಿದೆ ಹಾಗೂ ಚಾಲ್ತಿ ವರ್ಷದ ಕಾಮಗಾರಿಗಳಿಗಾಗಿ (ಲೆಕ್ಕಶೀರ್ಷಿಕೆ ಪಿ–1878) ¤.140.00 ಕೋಟಿಗಳನ್ನು ಕಾಯ್ದಿರಿಸಿದೆ. ಇದೇ ರೀತಿ ಲೆಕ್ಕಶೀರ್ಷಿಕೆ ಪಿ–2021 ಅಡಿಯಲ್ಲಿ ಚಾಲ್ತಿ ವರ್ಷದ ಕಾಮಗಾರಿಗಳಿಗಾಗಿ ¤.21.10 ಕೋಟಿಗಳನ್ನು ಕಾಯ್ದಿರಿಸಿದೆ. ಮೇಲೆ ಹೇಳಿದಂತೆ 2011–12ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳು/ ಕಾಮಗಾರಿಗಳಿಗಾಗಿ ¤.296.10 ಕೋಟಿಗಳನ್ನು ಕಾಯ್ದಿರಿಸಲಾಗಿದೆ.

ಸಮಿತಿಯ ತೀರ್ಮಾನದ ಮೇರೆಗೆ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ಲಭ್ಯವಿರುವ ¤.296.10 ಕೋಟಿ ಗಳಿಗೆ ಆಯಾ ವಾರ್ಡಿನಲ್ಲಿರುವ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಜನಸಂಖ್ಯೆಯ ಆಧಾರದ ಮೇಲೆ (2001ರ ಜನಗಣತಿ ಪ್ರಕಾರ) ವಾರ್ಡುವಾರು ಆಯವ್ಯಯದ ಅನುದಾನವನ್ನು ಹಂಚಿಕೆ ಮಾಡಿ ಅನುಬಂಧ–1ರಲ್ಲಿ ಇಡಲಾಗಿದೆ.

ಈಗಾಗಲೇ ಈ ವರ್ಷದಲ್ಲಿ ಲೆಕ್ಕ ಶೀರ್ಷಿಕೆ ಪಿ–1878 ¤.54.42 ಕೋಟಿ ರೂಗಳಿಗೆ ಅನುಮೋದನೆ ನೀಡಿ ಜಾಬ್ ಸಂಖ್ಯೆ ನೀಡಿರುವುದಾಗಿ ಆಯವ್ಯಯ ಪುಸ್ತಕದಲ್ಲಿ ದಾಖಲಾಗಿದೆ. ಆದರೂ ಸಹ ವಾರ್ಷಿಕ ಕ್ರಿಯಾಯೋಜನೆಗೆ ಈ ಮೊತ್ತವನ್ನು ಸೇರಿಸಿಕೊಳ್ಳಲಾಗಿದೆ.

ದಿನಾಂಕ: 15–02–2012ರಂದು ನಡೆದ ಸಾ.ನ್ಯಾ.ಸ್ಥಾ. ಸಮಿತಿಯ ಸಭೆಯಲ್ಲಿ ಈ ಸಭೆಯ ನಡವಳಿ ಅನುಬಂಧ–1 ರಲ್ಲಿರುವಂತೆ ವಿವಿಧ ವಾರ್ಡುಗಳಿಗೆ ಒಟ್ಟು ¤.90.94 ಕೋಟಿಗಳಿಗೆ ಅನುಮೋದನೆ ನೀಡಿ ಸಮಿತಿ ತೀರ್ಮಾನಿಸಿದೆ. ಇದೇ ರೀತಿ ದಿನಾಂಕ:13–03–2012ರಂದು ನಡೆದ ಸಾ.ನ್ಯಾ.ಸ್ಥಾ. ಸಮಿತಿಯ ಸಭೆಯಲ್ಲಿ ಕೆಲವೇ ವಾರ್ಡುಗಳಿಗೆ ¤.17.34 ಕೋಟಿಗಳಿಗೆ ಅನುಮೋದನೆ ನೀಡಿ ಜಾಬ್ ಸಂಖ್ಯೆ ನೀಡಲು ಸಮಿತಿ ತೀರ್ಮಾನಿಸಿದೆ. ಈ ಮೇಲ್ಕಂಡ ಅಂಶಗಳನ್ನು ಸಮಿತಿಯ ಗಮನಕ್ಕೆ ತರುತ್ತಾ ಈ ಕೆಳಕಂಡ ಅಂಶಗಳಿಗೆ ಸಮಿತಿಯ ಒಪ್ಪಿಗೆ ಕೋರಿದೆ.

1) 2011–12ನೇ ಸಾಲಿನ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಕಲ್ಯಾಣ ಕಾರ್ಯಕ್ರಮಗಳು ಹಾಗೂ ಕಾಮಗಾರಿಗಳಿಗೆಗಾಗಿ ವಾರ್ಡುವಾರು ತಯಾರಿಸಿರುವ ಅನುಬಂಧ–1ರಲ್ಲಿರುವ ಕ್ರಿಯಾಯೋಜನೆಗೆ ಒಪ್ಪಿಗೆ ನೀಡುವುದು.

2) ಈಗಾಗಲೇ ಈ ವರ್ಷದ ಆಯವ್ಯಯದಲ್ಲಿ ನಮೂದಿಸಿದಂತೆ ವಾರ್ಡುವಾರು ಮಂಜೂರಾಗಿ ಜಾಬ್ ಕೋಡ್ ನೀಡಿರುವ ಕಾಮಗಾರಿಗಳ ಮೊತ್ತವನ್ನು ಈಗ ತಯಾರಿಸಿರುವ ಕ್ರಿಯಾಯೋಜನೆಯ ವಾರ್ಡ್ ಅನುದಾನದ ಲೆಕ್ಕಕ್ಕೆ ತೆಗೆದುಕೊಳ್ಳುವುದು. ಒಂದು ವೇಳೆ ಈಗ ಕ್ರಿಯಾಯೋಜನೆಯಲ್ಲಿ ನಿಗದಿಪಡಿಸಿದ ಮೊತ್ತಕ್ಕೆ ಮಂಜೂರಾತಿ ಮೊತ್ತ ಮೀರಿದ್ದಲ್ಲಿ ಇದನ್ನು ಮುಂದಿನ ವರ್ಷದ (2012–13ನೇ ಸಾಲಿನ) ವಾರ್ಡ್ ಅನುದಾನದ ಲೆಕ್ಕಕ್ಕೆ ತೆಗೆದುಕೊಂಡು ಕಡಿತಗೊಳಿಸುವ ಷರತ್ತಿಗೊಳಪಡಿಸಿ ನೀಡುವುದು.

3) ಈಗಾಗಲೇ ವಿವಿಧ ದಿನಾಂಕಗಳಲ್ಲಿ ವಿವಿಧ ಕಾಮಗಾರಿಗಳಿಗೆ ಸಮಿತಿಯ ನಿರ್ಣಯವಾಗಿದ್ದು ಜಾಬ್ ಸಂಖ್ಯೆ ನೀಡದೇ ಇರುವ ಕಾಮಗಾರಿಗಳನ್ನು ಈ ಕ್ರಿಯಾಯೋಜನೆಯಲ್ಲಿ ನಿಗದಿಪಡಿಸಿರುವ ವಾರ್ಡುವಾರು ಅನುದಾನಕ್ಕೆ ಸೀಮಿತಗೊಳಿಸಿ ಜಾಬ್ ಸಂಖ್ಯೆ ನೀಡಲು ಅನುಮೋದನೆಗಾಗಿ ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ 28.03.2012ರ ವಿಶೇಷ ಆಯುಕ್ತರು (ಯೋಜನೆ)ರವರ ಎಲ್ಲಾ ಅಂಶಗಳನ್ನು ಒಪ್ಪಿ 2011–12ನೇ ಸಾಲಿನ ಕ್ರಿಯಾ ಯೋಜನೆಯನ್ನು ಸಮಿತಿಯು ಒಪ್ಪಿತು.

## ಹೆಚ್ಚುವರಿ ವಿಷಯಗಳು:

### 1. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 363 /11-12:

ವಿಶೇಷ ಆಯುಕ್ತರ ದಿನಾಂಕ: 14.03.12ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶ್ಚಿಮ ವಲಯಕ್ಕೆ ಸಂಬಂಧಿಸಿದಂತೆ ವಾರ್ಡ್-97ರ ವ್ಯಾಪ್ತಿಯಲ್ಲಿ ಬರುವ ಡಾ॥ ಬಿ.ಆರ್.ಅಂಬೇಡ್ಕರ್ ಫ್ರೀ ಟ್ಯೂಷನ್(ರಿ)., ನಂ: 30, 7ನೇ ಕ್ರಾಸ್, 5ನೇ ಮೈನ್, ಅಂಬೇಡ್ಕರ್ ನಗರ, ಶ್ರೀರಾಮಪುರ, ಬೆಂಗಳೂರು ಇವರು ಕಳೆದ 21 ವರ್ಷಗಳಿಂದ ಸರ್ಕಾರದಿಂದ ಯಾವುದೇ ಸೌಲಭ್ಯಗಳನ್ನು ಪಡೆಯದೇ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ತಮ್ಮ ಸಂಸ್ಥೆಯಿಂದ ಹಣ ಖರ್ಚು ಮಾಡಿ ಉಚಿತ ಪಾಠ ಶಾಲೆಯನ್ನು ನಡೆಸಿಕೊಂಡು ಬರುತ್ತಿದ್ದು, 2006-07ನೇ ಸಾಲಿನಲ್ಲಿ ಪಾಲಿಕೆಯ ಬಾಲಕಿಯರ ಪ್ರೌಢಶಾಲೆ, ದಯಾನಂದನಗರ, ಶ್ರೀರಾಮಪುರ ಮತ್ತು ಪಿಟ್ ಕಾಲೋನಿಯ ಮೂರು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಸಂಜೆ ವೇಳೆಯಲ್ಲಿ ಉಚಿತ ಪಾಠ-ಪ್ರವಚನಗಳನ್ನು ನೀಡಿ ಕ್ರಮವಾಗಿ ಶೇ.86, ಶೇ.100ರಷ್ಟು ಫಲಿತಾಂಶವನ್ನು ಪಡೆಯಲು ಸಹಕಾರ ನೀಡಿದ್ದು, ಈ ಸಂಸ್ಥೆಗೆ ವಿವಿಧ ಪ್ರದೇಶಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪ್ರವೇಶ ಕೋರಿರುತ್ತಿರುವುದರಿಂದ ಸ್ಥಳವಕಾಶ ಕೊರತೆಯೊಂದಿಗೆ ಆರ್ಥಿಕ ಕೊರತೆಯು ಇರುವುದರಿಂದ ಸಂಸ್ಥೆ ವತಿಯಿಂದ ರಾಜಾಜಿನಗರ, ಗಾಂಧಿನಗರ ಮತ್ತು ಚಾಮರಾಜಪೇಟೆ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವಂತಹ ಕೊಳಚೆ ಪ್ರದೇಶಗಳಲ್ಲಿ ಬಹುತೇಕ ಪ.ಜಾತಿ/ಪ.ಪಂಗಡದ ಬಡ ವಿದ್ಯಾರ್ಥಿಗಳಿಗಾಗಿ ಆಯಾ ಪ್ರದೇಶಗಳಲ್ಲಿ 20 ಕೇಂದ್ರಗಳನ್ನು ತೆರೆಯಲು ಉದ್ದೇಶಿಸಲಾಗಿದ್ದು, ಇವುಗಳ ನಿರ್ವಹಣೆಗೆ ತಗಲುವ ಅಂದಾಜು ವೆಚ್ಚಕ್ಕೆ ಪಾಲಿಕೆಯ ಕಲ್ಯಾಣ ಇಲಾಖೆಯಿಂದ ಸಹಾಯಧನವನ್ನಾಗಿ ಮಂಜೂರು ಮಾಡಲು ಸ್ಥಳೀಯ ಪಾಲಿಕೆ ಸದಸ್ಯರು ಜಂಟಿ ಆಯುಕ್ತರವರಿಗೆ ವಿಳಾಸ ಮಾಡಿರುವ ಪತ್ರದಲ್ಲಿ ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ, ಸಂಸ್ಥೆಯವರು ತಮ್ಮ ಮನವಿ ಪತ್ರದ ಜೊತೆಗೆ ಸಲ್ಲಿಸಿರುವ ಅಂದಾಜು ವೆಚ್ಚದ ಪಟ್ಟಿಯ ವಿವರಗಳು ಈ ಕೆಳಕಂಡಿತ್ತಿರುತ್ತದೆ.

**I. 20 ಕೇಂದ್ರಗಳನ್ನು ತೆರೆಯಲು ಉದ್ದೇಶಿಸಿರುವ ಪ್ರದೇಶಗಳ ವಿಳಾಸ:-**

1) ಅಂಬೇಡ್ಕರ್‌ನಗರ, 2) ಸ್ವತಂತ್ರಪಾಳ್ಯ, 3) ರಾಮಕೃಷ್ಣ ಸೇವಾನಗರ, 4) ಗೌತಮ್‌ನಗರ, 5) ಅರುಂಧತಿನಗರ, 6) ಹನುಮಂತಪುರ, 7) ವಳ್ಳುವಾರ್‌ಪುರಂ, 8) ಓಕಳೀಪುರಂ, 9) ರಿಸಲ್ದಾರ್ ಸ್ಟ್ರೀಟ್, 10) ಕೋದಂಡರಾಮಪುರ, 11) ಆರ್.ಜಿ.ಐ.ಕಾಲೋನಿ, 12) ಪ್ರಕಾಶನಗರ, 13) ದಯಾನಂದನಗರ ಸ್ಲಂ, 14) ರಾಮಚಂದ್ರಪುರ, 15) ಬಿಬಿಎಂಪಿ ಬಾಲಕಿಯರ ಪ್ರೌಢಶಾಲೆ, ದಯಾನಂದನಗರ, 16) ಬಿಬಿಎಂಪಿ ಪ್ರೌಢಶಾಲೆ, ಪಿಟ್ ಕಾಲೋನಿ, 17) ಬಿಬಿಎಂಪಿ ಪ್ರೌಢಶಾಲೆ, ಕೋದಂಡರಾಮಪುರ, 18) ಅಣ್ಣಿಯಮ್ಮ ಜೋಪಡಿ, 19) ಆನಂದಪುರಂ, 20) ಟಿ.ಸಿ.ಎಂ.ರಾಯನ್ ರಸ್ತೆ.

ಪ್ರತಿ ಕೇಂದ್ರಕ್ಕೆ ಗರಿಷ್ಠ 40 ವಿದ್ಯಾರ್ಥಿಗಳನ್ನು ಪ್ರವೇಶ ತೆಗೆದುಕೊಳ್ಳುವುದು.

**II.** ಒಂದು ಕೇಂದ್ರಕ್ಕೆ ಇಬ್ಬರು ಶಿಕ್ಷಕರ ಅವಶ್ಯಕತೆಯಿದ್ದು, ಇವರಿಗೆ ಮಾಸಿಕ ಸಂಭಾವನೆ ತಲಾ ▫.6000/-ಗಳಂತೆ 20 ಕೇಂದ್ರಗಳಿಗೆ ನಿಯೋಜಿಸುವ 40 ಮಂದಿ ಶಿಕ್ಷಕರಿಗೆ ತಗಲುವ ವಾರ್ಷಿಕ ಸಂಭಾವನೆ ವೆಚ್ಚ ▫.28,80,000.00.

**III.** 20 ಕೇಂದ್ರಗಳಿಗೆ ತಗಲುವ ವಾರ್ಷಿಕ ವಿದ್ಯುತ್ ಚಕ್ತಿ ಶುಲ್ಕ ▫.70,000.00

**IV.** 20 ಕೇಂದ್ರಗಳಿಗೆ ಬರುವಂತಹ ವಿದ್ಯಾರ್ಥಿಗಳಿಗೆ ಸಂಜೆಯ ವೇಳೆ ಲಘು ಉಪಾಹಾರ ನೀಡಲು ತಗಲುವ ವಾರ್ಷಿಕ ಅಂದಾಜು ವೆಚ್ಚ ▫.57,60,000.00

**V.** ಇತರೆ ಖರ್ಚು ವೆಚ್ಚಗಳು ವಾರ್ಷಿಕ ▫.3,00,000.00

**VI.** ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಸಮಾರಂಭ ಮಾಡಿ ಜ್ಞಾಪಕ ಉಡುಗೊರೆಗಳು ವಿತರಿಸಲು ಹಾಗೂ ಇತರೆ ವೆಚ್ಚ ▫.3,00,000.00

ಮೇಲ್ಕಂಡಂತೆ ವಿವರಿಸಿರುವಂತೆ ವಾರ್ಷಿಕ ▫.93,10,000.00ಗಳಷ್ಟು ಅಂದಾಜು ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಈ ಸಂಬಂಧ ಪರಿಶೀಲಿಸಲಾಗಿ ಸದರಿ ಕಾರ್ಯಕ್ರಮವನ್ನು ಈ ಕೆಳಕಂಡಂತೆ ಪಾಲಿಕೆಯು ಹೊರಡಿಸಿರುವ ಮಾರ್ಗಸೂಚಿಗಳಂತೆ ಕ್ರಮವಹಿಸಬೇಕಾಗಿರುತ್ತದೆ.

**A) ಕಾರ್ಯಕ್ರಮದ ಉದ್ದೇಶ:-**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಸರ್ಕಾರಿ ಅಥವಾ ಸರ್ಕಾರದ ಅನುದಾನಿತ ಶಾಲೆಗಳು/ಕಾಲೇಜುಗಳಲ್ಲಿ ಕ್ರಮವಾಗಿ 10ನೇ ತರಗತಿ/ದ್ವಿತೀಯ ಪಿ.ಯು.ಸಿ. ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸಂಜೆ ವೇಳೆಯ ವಿಶೇಷ ತರಗತಿಗಳನ್ನು ನಡೆಸಲು ಪಾಲಿಕೆಯಿಂದ ಆರ್ಥಿಕ ಸಹಾಯವನ್ನು ನೀಡುವುದು ಕಾರ್ಯಕ್ರಮದ ಉದ್ದೇಶವಾಗಿರುತ್ತದೆ. ವಿದ್ಯಾರ್ಥಿಗಳ ಅವಧಿಯಲ್ಲಿ ಎಸ್.ಎಸ್.ಎಲ್.ಸಿ. (10ನೇ ತರಗತಿ) ಹಾಗೂ ದ್ವಿತೀಯ ಪಿ.ಯು.ಸಿ. ತರಗತಿಗಳು ಬಹುಮುಖ್ಯ ಘಟ್ಟವಾಗಿರುವುದರಿಂದ ಅವರುಗಳಿಗೆ ವಿಶೇಷ ತರಗತಿಗಳನ್ನು ನೀಡಿದ್ದಲ್ಲಿ ಅವರುಗಳಿಗೆ ಉತ್ತಮ ಭವಿಷ್ಯವನ್ನು ರೂಪಿಸಿದಂತಾಗುತ್ತದೆ.

**B) ಕಾರ್ಯಕ್ರಮದ ವಿವರಣೆ:–**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಸರ್ಕಾರಿ ಅಥವಾ ಸರ್ಕಾರದ ಅನುದಾನಿತ ಶಾಲಾ–ಕಾಲೇಜುಗಳಲ್ಲಿ ಎಸ್.ಎಸ್.ಎಲ್.ಸಿ., ಅಥವಾ ದ್ವಿತೀಯ ಪಿ.ಯು.ಸಿ. ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪರಿಣಿತ ಶಾಲಾ ಶಿಕ್ಷಕರುಗಳು ಹಾಗೂ ಉಪನ್ಯಾಸಕರುಗಳಿಂದ ಸಂಜೆ ವೇಳೆಯಲ್ಲಿ ವಿಶೇಷ ತರಗತಿಗಳನ್ನು ನಡೆಸಿ ಅವರುಗಳಿಗೆ ಸಂಭಾವನೆಯನ್ನು ನೀಡಿ ಪಾಲಿಕೆಯಿಂದ ಭರಿಸಲಾಗುವುದು. ಸದರಿ ವಿಶೇಷ ತರಗತಿಗಳಿಗೆ ಹಾಜರಾದ ವಿದ್ಯಾರ್ಥಿಗಳಿಗೆ ಇಸ್ಕಾನ್ ಸಂಸ್ಥೆಯಿಂದ ರಾತ್ರಿಯ ಊಟವನ್ನು ಪೂರೈಸಲಾಗುವುದು.

**C) ಅರ್ಹತೆಗಳು:–**

1) ಸಂಜೆಯ ವೇಳೆಯ ವಿಶೇಷ ತರಗತಿಗಳನ್ನು ನಡೆಸುವ ಸರ್ಕಾರಿ/ಸರ್ಕಾರದ ಅನುದಾನಿತ ಶಾಲಾ/ಕಾಲೇಜುಗಳು ಪಾಲಿಕೆ ವ್ಯಾಪ್ತಿಯಲ್ಲಿರಬೇಕು ಹಾಗೂ ವಿದ್ಯಾರ್ಥಿಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಭಾರತ ಸರ್ಕಾರದ ಚುನಾವಣಾ ಆಯೋಗವು ಮತದಾನಕ್ಕೆ ನಿಗಧಿಪಡಿಸಿರುವ ವಾಸದ ದೃಢೀಕರಣದ ದಾಖಲೆಗಳಲ್ಲಿನ ಯಾವುದಾದರೂ ಒಂದರ ಪ್ರತಿ, ಹಾಲಿ ಜನ ಪ್ರತಿನಿಧಿಗಳಿಂದ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ವಾಸಸ್ಥಳದ ದೃಢೀಕರಣ ಪತ್ರ ಅಥವಾ ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸ ದೃಢೀಕರಣ ಪತ್ರ ಸಲ್ಲಿಸಬೇಕು.
2) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿರುವುದಕ್ಕೆ ತಹಶೀಲ್ದಾರ್ ರವರಿಂದ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.
3) ಕುಟುಂಬದ ವಾರ್ಷಿಕ ಆದಾಯವು ¤.1.00 ಲಕ್ಷಗಳಿಗೆ ಮೀರಿರಬಾರದು. ಪ್ರಸಕ್ತ ಸಾಲಿನ ಆದಾಯ ಪ್ರಮಾಣ ಪತ್ರವನ್ನು ಒದಗಿಸಬೇಕು ಅಥವಾ ಬಿ.ಪಿ.ಎಲ್. ಕುಟುಂಬ ವರ್ಗದವರ ಮಕ್ಕಳು ಅರ್ಹರಾಗಿರುತ್ತಾರೆ.
4) ಕೊಳಚೆ ಪ್ರದೇಶಗಳಲ್ಲಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಯಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಮೊದಲ ಆದ್ಯತೆ ನೀಡುವುದು.
5) ವಿದ್ಯಾರ್ಥಿಗಳು ಸಂಜೆ ವೇಳೆಯ ತರಗತಿಗಳನ್ನು ನಡೆಸುತ್ತಿರುವ ಶಾಲಾ–ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರಬೇಕು. (ಸಂಬಂಧಪಟ್ಟ ಶಾಲಾ ಕಾಲೇಜುಗಳ ಮುಖ್ಯಸ್ಥರುಗಳು/ಪ್ರಾಂಶುಪಾಲರುಗಳಿಂದ ದೃಢೀಕರಣ ಸಲ್ಲಿಸಬೇಕು)
6) ಅರ್ಜಿದಾರರು 2 ಭಾವಚಿತ್ರಗಳನ್ನು ಅರ್ಜಿಯೊಂದಿಗೆ ನೀಡಬೇಕು.
7) ಸದರಿ ಸೌಲಭ್ಯವನ್ನು ಸರ್ಕಾರ/ಸರ್ಕಾರ ಸ್ವಮ್ಯದ ಸಂಸ್ಥೆಗಳಿಂದ ಪಡೆದಿರುವುದಿಲ್ಲವೆಂದು ಧೃಡೀಕರಣವನ್ನು ಬಿಳಿ ಹಾಳೆಯಲ್ಲಿ ಮುಚ್ಚಳಿಕೆ ಪತ್ರವನ್ನು ನೀಡಬೇಕು. ಈ ರೀತಿಯ ಸೌಲಭ್ಯವನ್ನು ಪಡೆದಿರುವವರು ವಿಶೇಷ ತರಗತಿಗೆ ಅರ್ಹರಾಗಿರುವುದಿಲ್ಲ.
8) ಶಾಲಾ/ಕಾಲೇಜು ಮುಖ್ಯಸ್ಥರ ಅನುಮೋದಿತ ವಿದ್ಯಾರ್ಥಿಗಳ ಪಟ್ಟಿಯನ್ನು ಪರಿಶೀಲಿಸಿ ಕ್ರಮಕೈಗೊಳ್ಳುವುದು.
9) ಸಮಾಜ ಕಲ್ಯಾಣ ಇಲಾಖೆ ಹಾಗೂ ಸರ್ಕಾರದ ಇತರೆ ಇಲಾಖೆ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಸದರಿ ಸೌಲಭ್ಯವನ್ನು ಪಡೆದಿರುವವರು ಅರ್ಹರಾಗಿರುವುದಿಲ್ಲ.

**D) ಆಯ್ಕೆ ವಿಧಾನ:–**

1) ವಲಯ ಕಛೇರಿಗಳಿಂದ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳನ್ನು ಸಂಪರ್ಕಿಸಿ ಸಂಜೆಯ ವೇಳೆಯ ತರಗತಿಗಳನ್ನು ನಡೆಸುವ ಶಾಲಾ/ಕಾಲೇಜುಗಳನ್ನು ಗುರುತಿಸುವುದು.
2) ಆಯಾಯ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆಯ ಆಧಾರದ ಮೇಲೆ ಗುರಿಯನ್ನು ನಿಗಧಿಪಡಿಸಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದು.
3) ಈ ಕಾರ್ಯಕ್ರಮದಡಿಯಲ್ಲಿ ಅಂಗವಿಕಲರಿಗೆ ಶೇಕಡ 3ರಷ್ಟು ಮೀಸಾಲಾತಿಯನ್ನು ಕಡ್ಡಾಯವಾಗಿ ನೀಡಬೇಕು.
4) ವಲಯವಾರು ಅಪರ/ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಶಾಲಾ–ಕಾಲೇಜುಗಳನ್ನು ಗುರುತಿಸಿ, ವಿದ್ಯಾರ್ಥಿಗಳ ಪಟ್ಟಿಯನ್ನು ಪೂರ್ಣಗೊಳಿಸುವುದು.

1. ವಲಯ ಅಪರ/ಜಂಟಿ ಆಯುಕ್ತರು – ಅಧ್ಯಕ್ಷರು

2. ವಲಯ ಉಪ ಆಯುಕ್ತರು – ಉಪಾಧ್ಯಕ್ಷರು

3. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಓರ್ವ ಪ್ರತಿನಿಧಿ – ಸದಸ್ಯರು

4. ಕ್ಷೇತ್ರ ಶಿಕ್ಷಣಾಧಿಕಾರಿಗಳು/ ಉಪ ನಿರ್ದೇಶಕರು

   ಕಾಲೇಜು ಶಿಕ್ಷಣ ಇಲಾಖೆ – ಸದಸ್ಯರು

5. ವಲಯದ ಕಲ್ಯಾಣಾಧಿಕಾರಿ – ಸದಸ್ಯ ಕಾರ್ಯದರ್ಶಿ

**E) <u>ಕಾರ್ಯ ವಿಧಾನ:–</u>**

1) ಪರಿಣಿತ ಶಾಲಾ ಶಿಕ್ಷಕರುಗಳು ಹಾಗೂ ಕಾಲೇಜುಗಳ ಉಪನ್ಯಾಸಕರುಗಳಿಂದ ಸಂಬಂಧಪಟ್ಟ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಎಲ್ಲಾ ವಿಷಯಗಳಲ್ಲು ವಿಶೇಷ ತರಗತಿಗಳನ್ನು ನಡೆಸುವುದು.
2) ವಿಶೇಷ ತರಗತಿಗಳನ್ನು ಸಂಜೆಯ ವೇಳೆಯಲ್ಲಿ 6.00 ಗಂಟೆಯಿಂದ 8.00 ಗಂಟೆಯವರೆಗೆ ನಡೆಸುವುದು.
3) ವಿಶೇಷ ತರಗತಿಗಳಿಗೆ ಪಾಠ ಹೇಳುವ ಶಿಕ್ಷಕರುಗಳು ಅಥವಾ ಭೋದನೆ ಮಾಡುವ ಉಪನ್ಯಾಸಕರುಗಳಿಗೆ ಪಾಲಿಕೆಯಿಂದ ಸಂಭಾವನೆಯನ್ನು ಪಾವತಿ ಮಾಡಲಾಗುವುದು.
4) ವಿಶೇಷ ತರಗತಿಗಳು ಮುಗಿದ ನಂತರ ಇಸ್ಕಾನ್ ಸಂಸ್ಥೆಯಿಂದ ವಿಶೇಷ ತರಗತಿಗೆ ಹಾಜರಾದ ವಿದ್ಯಾರ್ಥಿಗಳಿಗೆ ರಾತ್ರಿಯ ಊಟವನ್ನು ಪೂರೈಸುವುದು.
5) ವಲಯದ ಕಲ್ಯಾಣಾಧಿಕಾರಿಗಳು ಶಾಲಾ/ಕಾಲೇಜುಗಳನ್ನು ಸ್ಥಳ ಪರಿಶೀಲಿಸಿ, ಶಾಲಾ/ಕಾಲೇಜುಗಳಲ್ಲಿ ಸಂಜೆಯ ವೇಳೆಯ ವಿಶೇಷ ತರಗತಿಗಳನ್ನು ನಡೆಸಿರುವ ಕುರಿತು ವಲಯದ ಅಪರ/ಜಂಟಿ ಆಯುಕ್ತರುಗಳಿಗೆ ಕೂಲಂಕುಷವಾದ ವರದಿಯನ್ನು ಸಲ್ಲಿಸುವುದು.
6) ಶಾಲಾ/ಕಾಲೇಜುಗಳ ಮುಖ್ಯಸ್ಥರುಗಳು ಹಾಗೂ ಪ್ರಾಂಶುಪಾಲರುಗಳು ಪ್ರತಿ ತಿಂಗಳು ಮಾಸಿಕ ಪರೀಕ್ಷೆಯನ್ನು ನಡೆಸಿ ಅದರ ವರದಿಯನ್ನು ವಲಯ ಕಛೇರಿಗಳಿಗೆ ಸಲ್ಲಿಸುವುದು.
7) ಆಯಾ ಶಾಲಾ/ಕಾಲೇಜುಗಳ ಮುಖ್ಯಸ್ಥರುಗಳಿಂದ ಸಂಜೆ ವೇಳೆಯ ವಿಶೇಷ ತರಗತಿಗಳಿಗೆ ಹಾಜರಾದ ವಿದ್ಯಾರ್ಥಿಗಳ 10ನೇ/ದ್ವಿತೀಯ ಪಿ.ಯು.ಸಿ. ತರಗತಿಯ ಅಂತಿಮ ಫಲಿತಾಂಶದ ವಿವರಗಳನ್ನು ಸಂಬಂಧಪಟ್ಟ ವಲಯ ಕಛೇರಿಗಳಿಗೆ ಸಲ್ಲಿಸತಕ್ಕದ್ದು.

ಮೇಲ್ಕಂಡ ಮಾರ್ಗಸೂಚಿಗಳನ್ವಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಶೈಕ್ಷಣಿ ಕಲ್ಯಾಣ ಕಾರ್ಯಕ್ರಮದಡಿ ಸಂಜೆಯ ವೇಳೆಯ ವಿಶೇಷ ತರಗತಿಗಳನ್ನು ನಡೆಸಲು ಶಾಲಾ/ಕಾಲೇಜುಗಳಿಗೆ ಆರ್ಥಿಕ ಸಹಾಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಪಶ್ಚಿಮ ವಲಯ ವ್ಯಾಪ್ತಿಯಲ್ಲಿನ ಸರ್ಕಾರಿ/ಸರ್ಕಾರಿ ಅನುದಾನಿತ ಶಾಲಾ/ಕಾಲೇಜುಗಳಲ್ಲಿ ಸಂಜೆ ವೇಳೆ 10ನೇ ತರಗತಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಗುರುತಿಸಿ ಆಯಾ ಶಾಲಾ/ಕಾಲೇಜುಗಳಲ್ಲಿ ತರಗತಿಗಳನ್ನು ನಡೆಸಲು ಹಾಗೂ ಭೋಧಕರಿಗೆ ಸಂಭಾವನೆ ನೀಡಿ ತರಗತಿಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಇಸ್ಕಾನ್ ಸಂಸ್ಥೆಯಿಂದ ರಾತ್ರಿಯ ಊಟದ ವ್ಯವಸ್ಥೆ ಮಾಡಲು ನಿರ್ದೇಶನವಿದ್ದು, ವಿವಿಧ ಸಂಘ–ಸಂಸ್ಥೆಗಳ ಮುಖಾಂತರ ಆಯ್ದಾ ಕೊಳಚೆ ಪ್ರದೇಶಗಳಲ್ಲಿ ವಿಶೇಷ ತರಗತಿಗಳನ್ನು ನಡೆಸಲು ಅವಕಾಶ ಇರುವುದಿಲ್ಲ.

ಆದರೇ, ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಈ ಹಿಂದೆ ಸಾರ್ವಜನಿಕ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗಿ ಪಶ್ಚಿಮ ವಲಯದಿಂದ ಯಾವುದೇ ಶಿಕ್ಷಣ ಸಂಸ್ಥೆಯವರಿಂದ ಪ್ರತಿಕ್ರಿಯೆ ಬರದೇ ಸದರಿ ಕಾರ್ಯಕ್ರಮಕ್ಕೆ ನಿಗಧಿಪಡಿಸಿದ ಅನುದಾನವು ಖರ್ಚಾಗದೇ ಉಳಿಕೆಯಾಗುತ್ತಿರುವುದರಿಂದ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಮುಂದೆ ಬಂದಿರುವ ಡಾ॥ ಬಿ.ಆರ್.ಅಂಬೇಡ್ಕರ್ ಫ್ರೀ ಟ್ಯೂಷನ್(ರಿ)., ರವರು ಪಶ್ಚಿಮ ವಲಯದ ವಿವಿಧ ಕೊಳಚೆ ಪ್ರದೇಶಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸಿ 10ನೇ ತರಗತಿಯ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ನಡೆಸಲು ಅನುಮತಿ ನೀಡುವುದು ಸೂಕ್ತವಾಗಿದ್ದು, ಅರ್ಜಿದಾರರಿಗೆ ತಮ್ಮ ಅರ್ಜಿಯಲ್ಲಿ ವಿವರಿಸಿರುವಂತೆ ಈ ಹಿಂದೆ ಪಾಲಿಕೆಯ ಶಾಲೆಗಳಲ್ಲಿ ವಿಶೇಷ ತರಗತಿಗಳನ್ನು ನಡೆಸಿ ಉತ್ತಮ ಫಲಿತಾಂಶ ನೀಡಿರುವ ಬಗ್ಗೆ ಪಾಲಿಕೆಯ ವಿದ್ಯಾಧಿಕಾರಿಯವರಿಂದ ಸೂಕ್ತ ವರದಿಯನ್ನು ಪಡೆದು ವರದಿಯು

ತೃಪ್ತಿಕರವಾಗಿದ್ದಲ್ಲಿ ಅಕ್ಟೋಬರ್‌–2011 ರಿಂದ ಮಾರ್ಚ್‌–2012ರವರೆಗೆ ಆರು ತಿಂಗಳ ಅವಧಿಗೆ ಮಾತ್ರ ವಿಶೇಷ ತರಗತಿಗಳನ್ನು ನಡೆಸಲು ತಗಲುವ ವೆಚ್ಚವನ್ನು ಪರಿಶೀಲನೆಯ ವರದಿಯನ್ನು ಆಧಾರಿಸಿ ಪಾಲಿಕೆಯಿಂದ ಭರಿಸಬಹುದಾಗಿದೆ.

ಈ ಸಂಬಂಧವಾಗಿ ಮೇಲ್ಕಂಡಂತೆ ಕೋರಿರುವ ಮಾಹಿತಿಗೆ ಅನುಗುಣವಾಗಿ ವಿದ್ಯಾಧಿಕಾರಿಗಳ ಕಛೇರಿಯಲ್ಲಿ ಕಡತವನ್ನು ಪರಿಶೀಲಿಸಿ, 2006–07ನೇ ಸಾಲಿನಲ್ಲಿ ಪಾಲಿಕೆಯ ಪ್ರೌಢಶಾಲೆಗಳಾದ ದಯಾನಂದನಗರ, ಪಿಟ್‌ ಕಾಲೋನಿ ಮತ್ತು ಕೋದಂಡರಾಮಪುರ ಈ ಶಾಲೆಗಳಲ್ಲಿನ 10ನೇ ತರಗತಿ ವ್ಯಾಸಂಗ ಮಾಡುವ ಬಡ ವಿದ್ಯಾರ್ಥಿಗಳಿಗೆ ಡಾ॥ ಬಿ.ಆರ್‌.ಅಂಬೇಡ್ಕರ್‌ ಫ್ರೀ ಟ್ಯೂಷನ್‌ ಟ್ರಸ್ಟ್‌ ರವರು ಉಚಿತ ತರಗತಿಗಳನ್ನು ನಡೆಸಿ ಉತ್ತಮ ಫಲಿತಾಂಶ ತರುವಲ್ಲಿ ಸಹಕರಿಸಿರುತ್ತಾರೆ ಹಾಗೂ ಪ್ರಸಕ್ತ ಸಾಲಿನಲ್ಲೂ ಸಹ ಸದರಿ ಶಾಲೆಗಳಲ್ಲಿ ಉಚಿತ ವಿಶೇಷ ತರಗತಿಗಳನ್ನು ನಡೆಸಲು ಅನುಮತಿ ಕೋರಿದ್ದು, ರಾಜಾಜಿನಗರ, ಗಾಂಧಿನಗರ ಮತ್ತು ಚಾಮರಾಜಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿನ ವಿವಿಧ 20 ಕೊಳಚೆ ಪ್ರದೇಶಗಳಲ್ಲಿ ಉಚಿತ ವಿಶೇಷ ತರಗತಿ ಶಾಲೆಗಳನ್ನು ತೆರೆಯಲು ನಿಯಮಾನುಸಾರ ಪರಿಶೀಲಿಸಿ ಅವಕಾಶವಿದ್ದಲ್ಲಿ ಮಾತ್ರ ಸಂಸ್ಥೆಗೆ ಅನುದಾನವನ್ನು ನೀಡಬಹುದೆಂದು ವಿದ್ಯಾಧಿಕಾರಿಯವರು ಸಲ್ಲಿಸಿರುವ ಅಭಿಪ್ರಾಯ ವರದಿಯನ್ನು ತಮ್ಮ ಅವಗಾಹನೆಗೆ ತರಲಾಗಿದೆ.

ಮುಂದುವರೆದು, ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಈ ಹಿಂದೆ ಸಾರ್ವಜನಿಕ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗಿ ಪಶ್ಚಿಮ ವಲಯದಿಂದ ಯಾವುದೇ ಶಿಕ್ಷಣ ಸಂಸ್ಥೆಯವರಿಂದ ಪ್ರತಿಕ್ರಿಯೆ ಬರದೇ ಸದರಿ ಕಾರ್ಯಕ್ರಮಕ್ಕೆ ನಿಗಧಿಪಡಿಸಿದ ಅನುದಾನವು ಖರ್ಚಾಗದೇ ಉಳಿಕೆಯಾಗುತ್ತಿರುವುದರಿಂದ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಮುಂದೆ ಬಂದಿರುವ ಡಾ॥ ಬಿ.ಆರ್‌.ಅಂಬೇಡ್ಕರ್‌ ಫ್ರೀ ಟ್ಯೂಷನ್‌(ರಿ)., 5ನೇ ಮೈನ್‌, ಅಂಬೇಡ್ಕರ್‌ನಗರ, ಶ್ರೀರಾಮಪುರ, ಬೆಂಗಳೂರು–21 ಮತ್ತು ಆನಂದಪುರಂ ಯೂತ್‌ ವೆಲ್‌ಫೇರ್‌ ಆಸೋಷಿಯೆಷನ್‌, ಆನಂದಪುರಂ, ಮೈಸೂರು ರಸ್ತೆ, ಬೆಂಗಳೂರು–02. ರವರು ಪಶ್ಚಿಮ ವಲಯದ ವಿವಿಧ ಕೊಳಚೆ ಪ್ರದೇಶಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸಿ 10ನೇ ತರಗತಿಯ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ನಡೆಸಲು ಅನುಮತಿ ನೀಡುವುದು ಸೂಕ್ತವಾಗಿರುತ್ತದೆ.

| ಕ್ರ.ಸಂ | ಸಂಸ್ಥೆಯ ಹೆಸರು | ವಿಶೇಷ ತರಗತಿಗಳನ್ನು ನಡೆಸಲು ಆಯ್ಕೆ ಮಾಡಲಾದ ಕೊಳಚೆ ಪ್ರದೇಶಗಳ ವಿವರ |
|---|---|---|
| 1 | ಡಾ॥ ಬಿ.ಆರ್‌.ಅಂಬೇಡ್ಕರ್‌ ಫ್ರೀ ಟ್ಯೂಷನ್‌(ರಿ)., 5ನೇ ಮೈನ್‌, ಅಂಬೇಡ್ಕರ್‌ನಗರ, ಶ್ರೀರಾಮಪುರ, ಬೆಂಗಳೂರು–21 | 1) ಅಂಬೇಡ್ಕರ್‌ನಗರ, 2) ಸ್ವತಂತ್ರಪಾಳ್ಯ, 3) ರಾಮಕೃಷ್ಣ ಸೇವಾನಗರ, 4) ಗೌತಮ್‌ನಗರ, 5) ಅರುಂಧತಿನಗರ, 6) ಹನುಮಂತಪುರ, 7) ವಳ್ಳುವಾರ್‌ಪುರಂ, 8) ಓಕಳೀಪುರಂ, 9) ರಿಸಲ್ದಾರ್‌ ಸ್ಟ್ರೀಟ್‌, 10) ಕೋದಂಡರಾಮಪುರ, 11) ಆರ್‌.ಜಿ.ಐ.ಕಾಲೋನಿ, 12) ಪ್ರಕಾಶನಗರ, 13) ದಯಾನಂದನಗರ ಸ್ಲಂ, 14) ರಾಮಚಂದ್ರಪುರ, 15) ಅಣ್ಣಿಯಮ್ಮ ಜೋಪಡಿ, 16) ಟಿ.ಸಿ.ಎಂ.ರಾಯನ್‌ ರಸ್ತೆ. |
| 2 | ಆನಂದಪುರಂ ಯೂತ್‌ ವೆಲ್‌ಫೇರ್‌ ಆಸೋಷಿಯೆಷನ್‌, ಆನಂದಪುರಂ, ಮೈಸೂರು ರಸ್ತೆ, ಬೆಂಗಳೂರು–02 | ಆನಂದಪುರಂ |

ಮೇಲ್ಕಂಡ ಕೊಳಚೆ ಪ್ರದೇಶಗಳಲ್ಲಿ ಜನವರಿ–2012 ರಿಂದ ಮಾರ್ಚ್‌–2012ರವರೆಗೆ ಮೂರು ತಿಂಗಳ ಅವಧಿಗೆ ಪ್ರಸ್ತಾಪಿಸಿದ್ದು, ಈಗಾಗಲೇ ಜನವರಿ ಮಾಹೆ ಅಂತ್ಯವಾಗುತ್ತಿದ್ದು, ಫೆಬ್ರವರಿ–2012 ಮತ್ತು ಮಾರ್ಚ್‌–2012 ಎರಡು ತಿಂಗಳ ಅವಧಿಗೆ ಮಾತ್ರ ವಿಶೇಷ ತರಗತಿಗಳನ್ನು ನಡೆಸಲು ಅನುಮತಿ ನೀಡಬಹುದಾಗಿದ್ದು, ಸದರಿ ಸಂಸ್ಥೆಯವರಿಂದ ಎರಡು ತಿಂಗಳ ಅವಧಿಯಲ್ಲಿ ಮೇಲ್ಕಂಡ ಕೊಳಚೆ ಪ್ರದೇಶಗಳಲ್ಲಿನ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ವಿದ್ಯಾನಿಯರಿಗೆ ಉತ್ತಮ ರೀತಿಯಲ್ಲಿ ತರಗತಿಗಳನ್ನು ನಡೆಸಿ ಉತ್ತಮ ಅಂಕಗಳೊಂದಿಗೆ ಕನಿಷ್ಠ ಶೇ.90ರಷ್ಟು ವಿದ್ಯಾರ್ಥಿಗಳು ಎಸ್‌.ಎಸ್‌.ಎಲ್‌.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಪಕ್ಷದಲ್ಲಿ ಮುಂದಿನ 2012–13ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಈ ಸಂಸ್ಥೆಯವರಿಗೆ ಮೇಲ್ಕಂಡ ಮಾರ್ಗಸೂಚಿಗಳನ್ವಯ ಉಚಿತ ವಿಶೇಷ ತರಗತಿಗಳನ್ನು ನಡೆಸಲು ಒಡಂಬಡಿಕೆ ಮಾಡಿಕೊಳ್ಳಬಹುದಾಗಿದ್ದು, ಇದಕ್ಕೆ ತಗಲುವ ವೆಚ್ಚವನ್ನು ಪರಿಶೀಲನೆಯ ವರದಿಯನ್ನು ಆಧಾರಿಸಿ ಪಾಲಿಕೆಯಿಂದ ಭರಿಸಬಹುದಾಗಿದೆ. ಉಳಿದಂತೆ ರಾತ್ರಿ ಊಟದ ವ್ಯವಸ್ಥೆಯನ್ನು ಇಸ್ಕಾನ್‌ ಸಂಸ್ಥೆಯಿಂದ ಸರಬರಾಜು ಮಾಡಲು ಕ್ರಮವಹಿಸಬಹುದಾಗಿರುತ್ತದೆ.

ಈ ಅಂಶಗಳ ಹಿನ್ನಲೆಯಲ್ಲಿ ಪಶ್ಚಿಮ ವಲಯ ವ್ಯಾಪ್ತಿಗೆ ಬರುವ ವಿವಿಧ ವಾರ್ಡ್‌ಗಳಲ್ಲಿನ ಕೊಳಚೆ ಪ್ರದೇಶಗಳಲ್ಲಿ ಸಂಜೆ ವೇಳೆ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ವಿಶೇಷ ತರಗತಿಗಳನ್ನು ನಡೆಸಲು ಡಾ॥ ಬಿ.ಆರ್‌ ಅಂಬೇಡ್ಕರ್‌ ಟ್ಯೂಷನ್‌ ಟ್ರಸ್ಟ್‌(ರಿ)., ನಂ: 30, 7ನೇ ಕ್ರಾಸ್‌, 5ನೇ ಮೈನ್‌, ಅಂಬೇಡ್ಕರ್‌ನಗರ, ಶ್ರೀರಾಮಪುರ, ಬೆಂಗಳೂರು–21 ಮತ್ತು ಆನಂದಪುರಂ ಯೂತ್‌ ವೆಲ್‌ಫೇರ್‌ ಆಸೋಷಿಯೆಷನ್‌, ಆನಂದಪುರಂ, ಮೈಸೂರು ರಸ್ತೆ, ಬೆಂಗಳೂರು–02 ರವರಿಗೆ ಮೇಲ್ಕಂಡ ಹಂಚಿಕೆ ಮಾಡಲಾದ ಕೊಳಚೆ ಪ್ರದೇಶಗಳಲ್ಲಿ ಫೆಬ್ರವರಿ–

2012 ಮತ್ತು ಮಾರ್ಚ್–2012 ಎರಡು ತಿಂಗಳ ಅವಧಿಗೆ ಮಾತ್ರ ವಿಶೇಷ ತರಗತಿಗಳನ್ನು ನಡೆಸಲು ಅನುಮತಿ ನೀಡಬಹುದಾಗಾಗಿದ್ದು, ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಈ ಕೆಳಕಂಡಂತೆ ವಿವರಿಸಿರುವ ಅಂದಾಜು ವೆಚ್ಚವಾಗಲಿದೆ.

| ಕ್ರ. ಸಂ | ವಿವರ | ತಗಲುವ ಅಂದಾಜು ವೆಚ್ಚ |
|---|---|---|
| 1 | ಒಂದು ಕೇಂದ್ರಕ್ಕೆ ಇಬ್ಬರು ಶಿಕ್ಷಕರ ಅವಶ್ಯಕತೆಯಿದ್ದು, ಇವರಿಗೆ ಮಾಸಿಕ ಸಂಭಾವನೆ ತಲಾ ರೂ.6000/–ಗಳಂತೆ 20 ಕೇಂದ್ರಗಳಿಗೆ ನಿಯೋಜಿಸುವ 40 ಮಂದಿ ಶಿಕ್ಷಕರಿಗೆ ತಗಲುವ 2 ತಿಂಗಳ ಅವಧಿಯ ಸಂಭಾವನೆ ವೆಚ್ಚ | 4,80,000.00 |
| 2 | ವಿಶೇಷ ತರಗತಿಗಳು ಮುಗಿದ ನಂತರ ಇಸ್ಕಾನ್ ಸಂಸ್ಥೆಯಿಂದ ವಿಶೇಷ ತರಗತಿಗೆ ಹಾಜರಾದ ವಿದ್ಯಾರ್ಥಿಗಳಿಗೆ ರಾತ್ರಿಯ ಊಟವನ್ನು ಪೂರೈಸಲು ತಗಲುವ ವೆಚ್ಚ | 4,80,000.00 |
| 3 | 20 ಕೇಂದ್ರಗಳಿಗೆ ಎರಡು ತಿಂಗಳ ಅವಧಿಯಲ್ಲಿ ವಿದ್ಯುತ್ ಚಕ್ತಿ ಬಿಲ್ಲು ಪಾವತಿಸಲು ತಗಲುವ ವೆಚ್ಚ | 40,000.00 |
| 4 | ವಿಶೇಷ ತರಗತಿಗಳ ಅವಧಿ ಪೂರ್ಣಗೊಂಡ ನಂತರ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಸಮಾರಂಭ ಮಾಡಿ ಜ್ಞಾಪಕ ಉಡುಗೊರೆಗಳನ್ನು ವಿತರಿಸಲು ತಗಲುವ ವೆಚ್ಚ | 3,00,000.00 |
| 5 | ಇತರೆ ವೆಚ್ಚಗಳು (ಬ್ಲಾಕ್ ಬೋರ್ಡ್, ಲೇಖನ ಸಾಮಾಗ್ರಿಗಳು ಮತ್ತು ಪ್ರಚಾರಕ್ಕಾಗಿ) | 1,00,000.00 |
| **ಒಟ್ಟು ರೂ.** | | **14,00,000.00** |

ಮೇಲ್ಕಂಡಂತೆ ಕಾರ್ಯಕ್ರಮಕ್ಕೆ ತಗಲುವ ವೆಚ್ಚವನ್ನು ಭರಿಸಲು 2011–12ನೇ ಸಾಲಿನಲ್ಲಿ ಇನ್ನು ಅನುದಾನ ಹಂಚಿಕೆ ಮಾಡಿರುವುದಿಲ್ಲ. ಆದರೇ 2010–11ನೇ ಸಾಲಿನಲ್ಲಿ ಸದರಿ ಕಾರ್ಯಕ್ರಮಕ್ಕೆ ಮೀಸಲಿಟ್ಟ ಅನುದಾನವು ಖರ್ಚಾಗದೇ ಉಳಿಕೆಯಾಗಿದ್ದು, 2011–12ನೇ ಸಾಲಿಗೆ ಸ್ಪಿಲ್ ಓವರ್ ಆಗಿರುವುದರಿಂದ 2010–11ನೇ ಸಾಲಿನ ಆಯ–ವ್ಯಯ ಶೇ.22.75ರ ಶೈಕ್ಷಣಿಕ ಕಲ್ಯಾಣ ಕಾರ್ಯಕ್ರಮದಡಿ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳಿಗೆ ಸಂಜೆ ವೇಳೆಯಲ್ಲಿ ವಿಶೇಷ ತರಗತಿಗಳನ್ನು ನಡೆಸಲು ಶಾಲಾ/ಕಾಲೇಜುಗಳಿಗೆ ಆರ್ಥಿಕ ಸಹಾಯ ಉಪ ಲೆಕ್ಕ ಶೀರ್ಷಿಕೆಯಲ್ಲಿ ನಿಗಧಿಪಡಿಸಿರುವ ರೂ.135.00 ಲಕ್ಷಗಳ ಅನುದಾನದಲ್ಲಿ ಸದರಿ ಕಾರ್ಯಕ್ರಮಕ್ಕೆ ತಗಲುವ ಅಂದಾಜು ವೆಚ್ಚ ರೂ.14.00 ಲಕ್ಷಗಳನ್ನು ಭರಿಸಲು ಹಾಗೂ ಸದರಿ ಸಂಸ್ಥೆಯವರಿಂದ ಎರಡು ತಿಂಗಳ ಅವಧಿಯಲ್ಲಿ ಮೇಲ್ಕಂಡ ಕೊಳಚೆ ಪ್ರದೇಶಗಳಲ್ಲಿನ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ವಿದ್ಯಾನಿಯರಿಗೆ ಉತ್ತಮ ರೀತಿಯಲ್ಲಿ ತರಗತಿಗಳನ್ನು ನಡೆಸಿ ಉತ್ತಮ ಅಂಕಗಳೊಂದಿಗೆ ಕನಿಷ್ಠ ಶೇ.90ರಷ್ಟು ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಪಕ್ಷದಲ್ಲಿ ಮುಂದಿನ 2012–13ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಈ ಸಂಸ್ಥೆಯವರಿಗೆ ಮೇಲ್ಕಂಡ ಮಾರ್ಗಸೂಚಿಗಳನ್ವಯ ಉಚಿತ ವಿಶೇಷ ತರಗತಿಗಳನ್ನು ನಡೆಸಲು ಒಡಂಬಡಿಕೆ ಮಾಡಿಕೊಂಡು ಮೇಲ್ಕಂಡಂತೆ ವಿವರಿಸಿರುವ ಕಾರ್ಯಗಳಿಗೆ ತಗಲುವ ವೆಚ್ಚವನ್ನು ಪರಿಶೀಲನೆಯ ವರದಿಯನ್ನು ಆಧಾರಿಸಿ ಪಾಲಿಕೆಯಿಂದ ಭರಿಸುವ ಬಗ್ಗೆ ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ 14.03.2012ರ ವಿಶೇಷ ಅಯುಕ್ತರ ಟಿಪ್ಪಣಿ ಒಪ್ಪಲಾಯಿತು.

## 2. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 364/11–12:

ಅಪರ ಆಯುಕ್ತರು (ಯೋಜನೆ) ರವರ ದಿನಾಂಕ: 28.03.12ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶ್ಚಿಮ ವಲಯದ ಕಲ್ಯಾಣ ಇಲಾಖೆ ವತಿಯಿಂದ ಮಡಿವಾಳ ಸಮುದಾಯದ ವೃತ್ತಿ ನಿರತರಿಗೆ ಇಸ್ತ್ರೀ ಪೆಟ್ಟಿಗೆ ಮತ್ತು ತಳ್ಳುವ ಗಾಡಿ ಹಾಗೂ ಸಂಬಂಧಿಸಿದ ಪರಿಕರಗಳನ್ನು ವಿತರಿಸುವ ಸಲುವಾಗಿ ಈ ಕಛೇರಿಯ **ಟೆಂಡರ್ ಪ್ರಕಟಣೆ ಸಂಖ್ಯೆ: ಕಅ(ಪ)ಪಿಆರ್/51/10–11, ದಿನಾಂಕ: 05/12/2011** ರಂತೆ ಅರ್ಹ ಸರಬರಾಜು ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಮರು ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಈ ಸಂಬಂಧ ವೇಳಾ ಪಟ್ಟಿಯಂತೆ ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 22–12–2011 ರಂದು ತೆರೆಯಬೇಕಾಗಿದ್ದು, ಟೆಂಡರ್‌ಗಳನ್ನು ಸಲ್ಲಿಸಲು ನಿಗಧಿಪಡಿಸಿರುವ ಅಂತಿಮ ದಿನಾಂಕ: 20–12–2011ರಂದು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ದೋಷಗಳು ಉಂಟಾಗಿದ್ದು, ದಿನಾಂಕ: 21–12–2011ರ ಸಂಜೆ: 5:00 ಗಂಟೆಯವರೆಗೆ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕವನ್ನು ಮುಂದೂಡಲಾಗಿರುತ್ತದೆ. (ಅಂತರ್ಜಾಲದಲ್ಲಿ ತೆಗೆದ ಪ್ರತಿಯನ್ನು ಕಡತದಲ್ಲಿರಿಸಿದೆ). ಇದರನ್ವಯ ಎರಡು ದಿನಗಳು ಪೂರ್ಣಗೊಂಡ ನಂತರ ಅಂದರೆ ದಿನಾಂಕ: 24–12–2011ರಂದು ತಾಂತ್ರಿಕ

ಪ್ರಸ್ತಾವನೆ ತೆರೆಯಲಾಗಿ ಸದರಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ನಿಗಧಿತ ಇಎಂಡಿ ಮೊತ್ತಗಳನ್ನು ಸಲ್ಲಿಸಿರುವವರ ಪೈಕಿ ತಾಂತ್ರಿಕ ಪ್ರಸ್ತಾವನೆಯನ್ನು ಪರಿಗಣಿಸಲು ಅರ್ಹರಾಗಿರುವ ಸಂಸ್ಥೆಗಳ ವಿವರ ಈ ಕೆಳಕಂಡಂತ್ತಿದೆ.

1. A P Diwakar (Eswar Enterprise)
2. Krishnamurthy R (Sri Krishna Enterprises)
3. Rajinder Singh Khanuja (Excel Sports and Branch Excel Scientifics)

ತಾಂತ್ರಿಕ ಪ್ರಸ್ತಾವನೆಯಲ್ಲಿ ನಿಗಧಿಪಡಿಸಿರುವ ಅಂಶಗಳ ಅನುಸಾರ ಸಂಸ್ಥೆಯವರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲು ಜಂಟಿ ಆಯುಕ್ತರು (ಪಶ್ಚಿಮ) ರವರ ಅಧ್ಯಕ್ಷತೆಯಲ್ಲಿ ಒಂದು ತಾಂತ್ರಿಕ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ಟೆಂಡರ್ ದಾಖಲೆಗಳನ್ನು ಪರಿಶೀಲಿಸಿ, ಈ ಕೆಳಕಂಡಂತೆ ಪರಿಶೀಲನಾ ವರದಿಯನ್ನು ಸಲ್ಲಿಸಿರುತ್ತಾರೆ.

| ಕ್ರ ಸಂ | ಸಂಸ್ಥೆಯ ಹೆಸರು | ತಾಂತ್ರಿಕ ಮತ್ತು ಸಾಮಾನ್ಯ ನಿಬಂಧನೆಗಳ ಪರಿಶೀಲನಾ ಸಮಿತಿಯ ವರದಿಯಂತೆ ವಿವರ |
|---|---|---|
| 1 | A P Diwakar (Eshwar Enterprises) | ಸದರಿ ಸಂಸ್ಥೆಯವರು ಟೆಂಡರ್‌ನ ತಾಂತ್ರಿಕ ನಿಬಂಧನೆಗಳ ಪೈಕಿ ಕ್ರಮ ಸಂಖ್ಯೆ: (4) ಮತ್ತು (5)ರಲ್ಲಿನ ದಾಖಲೆಗಳನ್ನು ಸಲ್ಲಿಸದೇ ಇದ್ದು, ಅಪೂರ್ಣ ದಾಖಲೆಗಳನ್ನು ಸಲ್ಲಿಸಿ, ಸಾಮಾನ್ಯ ನಿಬಂಧನೆಗಳ ಎಲ್ಲಾ ಷರತ್ತುಗಳನ್ನು ಒಪ್ಪಿಗೆ ಸೂಚಿಸಿದ್ದರೂ ಸದರಿ ಸಂಸ್ಥೆಯವರು ತಾಂತ್ರಿಕವಾಗಿ ಅರ್ಹತೆ ಹೊಂದಿರುವುದಿಲ್ಲವೆಂದು ಪರಿಶೀಲನಾ ಸಮಿತಿಯು ಸರ್ವಾನುಮತದಿಂದ ತಿರ್ಮಾನಿಸಿರುತ್ತದೆ. |
| 2 | Krishnamurthy R (Sri Krishna Enterprises) | ಸದರಿ ಸಂಸ್ಥೆಯವರು ಟೆಂಡರ್‌ನ ತಾಂತ್ರಿಕ ನಿಬಂಧನೆಗಳ ಪೈಕಿ 2008–09ನೇ ಸಾಲಿನ ಐಟಿಆರ್, ವ್ಯಾಟ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ಮತ್ತು 2009–10ನೇ ಸಾಲಿನ ಟರ್ನ್‌ಓವರ್ ಸರ್ಟಿಫಿಕೆಟ್‌ನಲ್ಲಿ ಭಾಗಶಃ ದಾಖಲಾತಿಗಳನ್ನು ಸಲ್ಲಿಸಿದ್ದರೂ ಸಹ ಉಳಿದಂತೆ ಕೋರಿರುವ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿ, ಸಾಮಾನ್ಯ ನಿಬಂಧನೆಗಳ ಎಲ್ಲಾ ಷರತ್ತುಗಳನ್ನು ಒಪ್ಪಿಗೆ ಸೂಚಿಸಿದ್ದರೂ ಸದರಿ ಸಂಸ್ಥೆಯವರು ಆರ್ಥಿಕವಾಗಿ ಸಧೃಢವಾಗಿರುವುದನ್ನು ಪರಿಗಣಿಸಿ, ಸಂಸ್ಥೆಯು ತಾಂತ್ರಿಕವಾಗಿ ಅರ್ಹತೆ ಹೊಂದಿರುವ ಇವರ ತಾಂತ್ರಿಕ ಬಿಡ್‌ನ್ನು ಅಂಗೀಕರಿಸಿ ಆರ್ಥಿಕ ಬಿಡ್‌ಗೆ ಪರಿಗಣಿಸಬಹುದೆಂದು ಪರಿಶೀಲನಾ ಸಮಿತಿಯು ಸರ್ವಾನುಮತದಿಂದ ತಿರ್ಮಾನಿಸಿರುತ್ತದೆ. |
| 3 | Rajinder Singh Khanuja (Excel Sports and Branch Excel Scientifics) | ಸದರಿ ಸಂಸ್ಥೆಯವರು ಟೆಂಡರ್‌ನ ತಾಂತ್ರಿಕ ನಿಬಂಧನೆಗಳ ಪೈಕಿ 2009–10 ಮತ್ತು 2010–11ನೇ ಸಾಲಿನ ಎರಡು ವರ್ಷಗಳ ಕಾರ್ಯಾದೇಶ ಸಲ್ಲಿಸಿದ್ದರೂ ಸಹ ಟೆಂಡರ್‌ನಲ್ಲಿ ಕೋರಿರುವಂತೆ ಎರಡು ವರ್ಷಗಳಿಗೆ ಸೇರಿ ರೂ.30.00 ಲಕ್ಷಗಳಿಗಿಂತ ಅಧಿಕ ವಹಿವಾಟು ಇದ್ದು, ಉಳಿದಂತೆ ಕೋರಿರುವ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿ, ಸಾಮಾನ್ಯ ನಿಬಂಧನೆಗಳ ಎಲ್ಲಾ ಷರತ್ತುಗಳನ್ನು ಒಪ್ಪಿಗೆ ಸೂಚಿಸಿದ್ದರೂ ಸದರಿ ಸಂಸ್ಥೆಯವರು ಆರ್ಥಿಕವಾಗಿ ಸಧೃಢವಾಗಿರುವುದನ್ನು ಪರಿಗಣಿಸಿ, ಸಂಸ್ಥೆಯು ತಾಂತ್ರಿಕವಾಗಿ ಅರ್ಹತೆ ಹೊಂದಿರುವ ಇವರ ತಾಂತ್ರಿಕ ಬಿಡ್‌ನ್ನು ಅಂಗೀಕರಿಸಿ ಆರ್ಥಿಕ ಬಿಡ್‌ಗೆ ಪರಿಗಣಿಸಬಹುದೆಂದು ಪರಿಶೀಲನಾ ಸಮಿತಿಯು ಸರ್ವಾನುಮತದಿಂದ ತಿರ್ಮಾನಿಸಿರುತ್ತದೆ. |

ಮೇಲ್ಕಂಡಂತೆ ತಾಂತ್ರಿಕ ಬಿಡ್‌ನಲ್ಲಿ ಸಫಲರಾದ ಕ್ರ.ಸಂಖ್ಯೆ (2) ಮತ್ತು (3)ರಲ್ಲಿನ ಸಂಸ್ಥೆಯವರ ಆರ್ಥಿಕ ಬಿಡ್‌ನ್ನು e-Portal ಮುಖಾಂತರ ದಿನಾಂಕ: 07–02–2012 ರಂದು ತೆರೆಯಲಾಗಿದ್ದು, ಇಸ್ತ್ರೀ ಪೆಟ್ಟಿಗೆ ಮತ್ತು ನಾಲ್ಕು ಚಕ್ರದ ತಳ್ಳುವ ಗಾಡಿ ಹಾಗೂ ಸಂಬಂಧಿಸಿದ ಪರಿಕರಗಳಿಗೆ ಈ ಕೆಳಕಂಡಂತೆ ದರಗಳನ್ನು ನಮೂದಿಸಿರುತ್ತಾರೆ.

## R Krishnamurthy (Sri Krishna Enterprises)

| Sl. No | Items | | Rate/kit | Vat | Total |
|---|---|---|---|---|---|
| 1 | IRON BOX | Size :- Length-66"/Width -35" Wood Thickness - 3/4", and Flat 40x5 mm, Four Cycle tyres of 8 ply | 4800.00 | 672.00 | 5472.00 |
| 2 | FOUR WHEEL PUSHING CART | Size :- Length-66"/Width -35" Wood Thickness - 3/4", and Flat 40x5 mm, Four Cycle tyres of 8 ply | 6800.00 | 340.00 | 7140.00 |
| 3 | ZINK BUCKET | 51t. Capacity | 98.00 | 13.00 | 111.00 |
| 4 | PLASTIC MUG | 1.51t. Capacity | 23.00 | 1.00 | 24.00 |
| 5 | SPONGE | Good Quality | 17.00 | 1.00 | 18.00 |
| **Total** | | | **11738.00** | **1027.00** | **12765.00** |

## Rajendra Singh Khanuja (Excel Sports and Branch Excel Scientifics)

| Sl. No | Items | | Rate/kit | Vat | Total |
|---|---|---|---|---|---|
| 1 | IRON BOX | Size :- Length-66"/Width -35" Wood Thickness - 3/4", and Flat 40x5 mm, Four Cycle tyres of 8 ply | 4600.00 | 644.00 | 5244.00 |
| 2 | FOUR WHEEL PUSHING CART | Size :- Length-66"/Width -35" Wood Thickness - 3/4", and Flat 40x5 mm, Four Cycle tyres of 8 ply | 6800.00 | 340.00 | 7140.00 |
| 3 | ZINK BUCKET | 51t. Capacity | 160.00 | 22.40 | 182.40 |
| 4 | PLASTIC MUG | 1.51t. Capacity | 26.00 | 3.65 | 29.65 |
| 5 | SPONGE | Good Quality | 11.00 | 1.50 | 12.50 |
| **Total** | | | **11597.00** | **1011.55** | **12608.55** |

ಮೇಲ್ಕಂಡಂತೆ ಸಲ್ಲಿಸಿರುವ ದರಗಳನ್ನು ತುಲನಾತ್ಮಕ ಮಾಡಲಾಗಿ, ಟೆಂಡರ್‌ನಲ್ಲಿ ಭಾಗವಹಿಸಿದ R Krishnamurthy (Sri Krishna Enterprises) ಮತ್ತು Rajendra Singh Khanuja (Excel Sports and Branch Excel Scientifics) ಈ ಎರಡು ಸಂಸ್ಥೆಯವರಿಗಿಂತ Rajinder Singh Khanuja (Excel Sports and Branch Excel Scientifics) ಸಂಸ್ಥೆಯವರು ಇಸ್ತ್ರೀ ಪೆಟ್ಟಿಗೆ ಮತ್ತು ನಾಲ್ಕು ಚಕ್ರದ ತಳ್ಳುವ ಗಾಡಿ ಹಾಗೂ ಸಂಬಂಧಿಸಿದ ಪರಿಕರಗಳಿಗೆ ತೆರಿಗೆ ಸೇರಿ □.12,608–55 ಕಡಿಮೆ ದರ ನಮೂದಿಸಿ ಎಲ್–1 ಬಿಡ್‌ದಾರರಾಗಿರುವ ಇವರನ್ನು ದಿನಾಂಕ: 08/02/2012 ರಂದು ದರ ಸಂಧಾನಕ್ಕೆ ಆಹ್ವಾನಿಸಲಾಗಿ, ಸದರಿ ಸಂಸ್ಥೆಯವರು ಟೆಂಡರ್ Specificationನಲ್ಲಿ ಕೋರಿರುವ ಸಾಮಾಗ್ರಿಗಳಿಗೆ ಅನುಗುಣವಾಗಿ ನಮೂದಿಸಿರುವ ಸಾಮಾಗ್ರಿಗಳ ದರವು ಸಮಂಜಸವಾಗಿದ್ದು, ಸದರಿ ದರಗಳಲ್ಲಿ ಕಡಿಮೆ ಮಾಡಲು ಸಾಧ್ಯವಿಲ್ಲವೆಂದು ಲಿಖಿತ ಪತ್ರದಲ್ಲಿ ತಿಳಿಸಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಲ್ಯಾಣ ಇಲಾಖೆಯ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದ ಕಲ್ಯಾಣ ಕಾರ್ಯಕ್ರಮದಡಿ ಹಿಂದುಳಿದ ವರ್ಗಗಳ ಸಮುದಾಯ ವೃತ್ತಿ ನಿರತರಿಗೆ ಅವರವರ ಕಸುಬುಗಳಿಗೆ ಅನುಗುಣವಾಗಿ □.10,000/–ಗಳಿಗೆ ಒಳಪಟ್ಟು ಸವಲತ್ತುಗಳನ್ನು ಖರೀದಿಸಿ ವಿತರಿಸಲು ಮಾರ್ಗಸೂಚಿಯಲ್ಲಿ ನಿರ್ದೇಶನವಿದ್ದು, ಇದರನ್ವಯ ಟೆಂಡರ್ ದಾಖಲಾತಿಗಳಲ್ಲಿ ಈ ಷರತ್ತನ್ನು ವಿಧಿಸಲಾಗಿದ್ದರೂ ಸಹ ಟೆಂಡರ್‌ನಲ್ಲಿ ಭಾಗವಹಿಸಿ ತಾಂತ್ರಿಕವಾಗಿ ಅರ್ಹತೆ ಹೊಂದಿದ ಮೇಲ್ಕಂಡ ಎರಡು ಸಂಸ್ಥೆಯವರು □.10,000/–ಗಳಿಗಿಂತ ಅಧಿಕವಾಗಿ ದರಗಳನ್ನು ನಮೂದಿಸಿದ್ದು, ಇವರುಗಳ ಪೈಕಿ ಮೆ॥ ಎಕ್ಸೆಲ್ ಸ್ಪೋರ್ಟ್ಸ್ ಅಂಡ್ ಬ್ರಾಂಚ್ ಎಕ್ಸೆಲ್ ಸೈಂಟಿಫಿಕ್ಸ್ ರವರು 5 ವಿವಿಧ ಸಾಮಾಗ್ರಿಗಳಿಗೆ ತೆರಿಗೆ ಸೇರಿ □.12,608–55ಗಳನ್ನು ದರ ನಮೂದಿಸಿದ್ದು, ದರ ಸಂದಾನದಲ್ಲಿ ಸಂಸ್ಥೆಯವರು ಈಗಿನ ಮಾರುಕಟ್ಟೆ ದರಗಳನ್ನು ಗಮನದಲ್ಲಿಟ್ಟುಕೊಂಡು ಅತೀ ಕಡಿಮೆ ದರ ನಮೂದಿಸಿರುವುದು ಸಮಂಜಸವಾಗಿದ್ದು, ಇದರಲ್ಲಿ ದರ ಕಡಿಮೆ ಮಾಡಲು ಲಿಖಿತ ಪತ್ರದಲ್ಲಿ ತಿಳಿಸಿರುತ್ತಾರೆ.

ಮುಂದುವರೆದು, ಕಳೆದ ವರ್ಷ R Krishnamurthy (Sri Krishna Enterprises) ಸಂಸ್ಥೆಯವರು ರೂ.9,373/–ಗಳಿಗೆ ಇಸ್ತ್ರೀ ಪೆಟ್ಟಿಗೆ, ತಳ್ಳುವ ಗಾಡಿ ಮತ್ತು ಸಂಬಂಧಿಸಿದ ಸಾಮಾಗ್ರಿಗಳನ್ನು ಸರಬರಾಜು ಮಾಡಿದ್ದು, ಈ ವರ್ಷ ಸದರಿ ಸಂಸ್ಥೆಯವರು ಟೆಂಡರ್‌ನಲ್ಲಿ ಭಾಗವಹಿಸಿ ಎಲ್–1 ಬಿಡ್‌ದಾರರಾದ Rajinder Singh Khanuja (Excel Sports and Branch Excel Scientifics) ಸಂಸ್ಥೆಯವರು ಸಲ್ಲಿಸಿರುವ ದರಗಳಿಗಿಂತ ರೂ.12,765/–ಗಳ ಹೆಚ್ಚಿಗೆ ದರಗಳನ್ನು ನಮೂದಿಸಿರುತ್ತಾರೆ. ಆದರೆ ದೋಬಿ ವೃತ್ತಿಯಲ್ಲಿ ತೊಡಗಿರುವವರರಿಗೆ ತಮ್ಮ ಕಸುಬಿಗೆ ಉಪಯೋಗಿಸುವ ಎಲ್ಲಾ ಸಾಮಾಗ್ರಿಗಳನ್ನು ಒದಗಿಸಿದ್ದಲ್ಲಿ ಮಾತ್ರ ಕಾರ್ಯಕ್ರಮವನ್ನು ಪೂರ್ಣವಾಗಿ ಅನುಷ್ಠಾನ ಮಾಡುವುದರ ಜೊತೆಗೆ ಫಲಾನುಭವಿಗಳಿಗೆ ಆರ್ಥಿಕ ತೊಂದರೆಯಾಗದಂತೆ ಇನ್ನು ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡಿದಂತಾಗುತ್ತದೆ.

ಈ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ವರ್ಗಗಳ ಗುಂಪಿಗೆ ಸೇರಿದ ದೋಬಿ, ಸವಿತಾ ಸಮಾಜ, ಚಮ್ಮಾರ (ಚರ್ಮಕಾರ), ಕಮ್ಮಾರ, ವಿಶ್ವಕರ್ಮ, ಬಡಗಿ, ಕುಂಬಾರ ಇತ್ಯಾದಿ ವೃತ್ತಿ ನಿರತರಿಗೆ ಅವರವರ ಕಸುಬುಗಳಿಗೆ ಆರ್ಥಿಕ ಸಹಾಯ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಸದರಿ ಕಾರ್ಯಕ್ರಮದಲ್ಲಿ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದ ವೃತ್ತಿ ನಿರತರಿಗೆ ಅವರವರ ಸಂಪ್ರಾದಾಯಿಕ ಕುಲಕಸುಬುಗಳನ್ನು ಮಾಡ ಬಯಸುವವರಿಗೆ ಪಾಲಿಕೆ ವತಿಯಿಂದ ಆರ್ಥಿಕ ಸಹಾಯ ನೀಡಿ, ಅವರುಗಳು ಆರ್ಥಿಕ ಸ್ವಾವಲಂಭಿಗಳಾಗಿ ಅಭಿವೃದ್ಧಿ ಹೊಂದುವಂತೆ ಮಾಡುವುದು ಈ ಕಾರ್ಯಕ್ರಮದ ಉದ್ದೇಶವಾಗಿರುವುದರಿಂದ ಅವರ ಕಸುಬುಗಳಿಗೆ ಅವಶ್ಯವಿರುವ ಎಲ್ಲಾ ಸಾಮಾಗ್ರಿಗಳನ್ನು ಒದಗಿಸುವುದು ಸೂಕ್ತವಾಗಿರುತ್ತದೆ.

ಆದುದರಿಂದ, ಈಗಾಗಲೇ ಹೊರಡಿಸಿರುವ ಮಾರ್ಗಸೂಚಿಗಳಲ್ಲಿ ನಿಗಧಿಪಡಿಸಿರುವ ರೂ.10,000/–ಗಳಿಗೆ ಒಳಪಟ್ಟು ಸವಲತ್ತುಗಳನ್ನು ನೀಡಲು ವಿಧಿಸಿರುವ ಷರತ್ತನ್ನು ಸಡಿಲಗೊಳಿಸಿ ಮಡಿವಾಳ ಸಮುದಾಯ ವೃತ್ತಿ ನಿರತರಿಗೆ ಅವಶ್ಯವಿರುವ ಎಲ್ಲಾ ಸಾಮಾಗ್ರಿಗಳನ್ನು ಖರೀದಿಸಿ ವಿತರಿಸಲು ತಗಲುವ ವೆಚ್ಚವನ್ನು ಸಂಪೂರ್ಣವಾಗಿ ಪಾಲಿಕೆಯಿಂದ ಭರಿಸಿ ಸದರಿ ಟೆಂಡರ್‌ನಲ್ಲಿ ಭಾಗವಹಿಸಿ ಎಲ್–1 ಬಿಡ್‌ದಾರರಾಗಿರುವ ಮೆ॥ಎಕ್ಸೆಲ್ ಸ್ಪೋರ್ಟ್ಸ್ ಅಂಡ್ ಬ್ರಾಂಚ್ ಎಕ್ಸೆಲ್ ಸೈಂಟಿಪಿಕ್ಸ್ ರವರು 5 ವಿವಿಧ ಸಾಮಾಗ್ರಿಗಳಿಗೆ ನಮೂದಿಸಿರುವ ದರ ರೂ.12,608–55ಗಳ ದರದಲ್ಲಿ ಇಸ್ತ್ರೀ ಪೆಟ್ಟಿಗೆ, ನಾಲ್ಕು ಚಕ್ರದ ತಳ್ಳುವ ಗಾಡಿ ಮತ್ತು ಸಂಬಂಧಿಸಿದ ಸಾಮಾಗ್ರಿಗಳನ್ನು ಖರೀದಿಸಿ ಫಲಾನುಭವಿಗಳಿಗೆ ವಿತರಿಸಬೇಕಾಗಿರುತ್ತದೆ.

ಈ ಬಗ್ಗೆ ಪರಿಶೀಲಿಸಲಾಗಿ, 2010–11ನೇ ಸಾಲಿಗೆ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದ ಕಲ್ಯಾಣ ಕಾರ್ಯಕ್ರಮದಡಿ ಸಮುದಾಯದ ವೃತ್ತಿ ನಿರತರಿಗೆ ಅವರವರ ಕಸುಬುಗಳಿಗೆ ಆರ್ಥಿಕ ಸಹಾಯ ಕಾರ್ಯಕ್ರಮವಿದ್ದು, ಸುಮಾರು 150 ಮಂದಿ ಫಲಾನುಭವಿಗಳಿಗೆ ಅಂದಾಜು ವೆಚ್ಚ ರೂ.15.00 ಲಕ್ಷಗಳಲ್ಲಿ ಇಸ್ತ್ರೀ ಪೆಟ್ಟಿಗೆ ಮತ್ತು ನಾಲ್ಕು ಚಕ್ರದ ತಳ್ಳುವ ಗಾಡಿ ನೀಡಬೇಕಾಗಿರುವುದರಿಂದ ಈಗಾಗಲೇ ಹಿಂದುಳಿದ ವರ್ಗದ ಕಲ್ಯಾಣ ಕಾರ್ಯಕ್ರಮದಡಿ ಸದರಿ ಕಾರ್ಯಕ್ರಮಕ್ಕೆ ನಿಗಧಿಪಡಿಸಿರುವ ಅನುದಾನ ರೂ.74.70 ಲಕ್ಷಗಳಲ್ಲಿ 2009–10ನೇ ಸಾಲಿನ ಬಾಕಿ ಬಿಲ್ಲಿನ ಮೊತ್ತ ರೂ.44.92 ಲಕ್ಷಗಳನ್ನು ಪಾವತಿಸಿದ್ದು, ರೂ.29.78 ಲಕ್ಷಗಳು ಮಾತ್ರ ಉಳಿಕೆಯಾಗಿದ್ದು, ರೂ.15.00 ಲಕ್ಷಗಳಿಗೆ ಬಾರ್‌ಬರ್ ಛೇರ್‌ಗಳನ್ನು ಖರೀದಿಸಲು ಟೆಂಡರ್ ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಗೆ ಟಿಪ್ಪಣಿ ಸಲ್ಲಿಸಿದ್ದು, ರೂ.14.78 ಲಕ್ಷಗಳು ಮಾತ್ರ ಉಳಿಕೆಯಾಗಿರುವ ಮೊತ್ತವನ್ನು ತರಕಾರಿ ಗಾಡಿಗಳಿಗೆ ಪ್ರಸ್ತಾಪಿಸಿದ್ದು, ಸದರಿ ಮೇಲ್ಕಂಡ ಇಸ್ತ್ರೀ ಪೆಟ್ಟಿಗೆ ಮತ್ತು ತಳ್ಳುವ ಗಾಡಿಗೆ ತಗಲುವ ವೆಚ್ಚ ರೂ.15.00 ಲಕ್ಷಗಳನ್ನು 2011–12ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಹೆಚ್ಚಿನ ಅನುದಾನವನ್ನು ನಿಗಧಿಪಡಿಸಿಕೊಂಡು ವೆಚ್ಚ ಭರಿಸಬೇಕಾಗಿರುತ್ತದೆ.

ಈ ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಸದರಿ ಟೆಂಡರ್‌ನಲ್ಲಿ ಎಲ್–1 ಬಿಡ್‌ದಾರರಾಗಿ ಆಯ್ಕೆಯಾದ ಮೆ॥ಎಕ್ಸೆಲ್ ಸ್ಪೋರ್ಟ್ಸ್ ಅಂಡ್ ಬ್ರಾಂಚ್ ಎಕ್ಸೆಲ್ ಸೈಂಟಿಪಿಕ್ಸ್ ಸಂಸ್ಥೆಯವರ ಟೆಂಡರ್‌ನ್ನು ಕರ್ನಾಟಕ ಪಾರದರ್ಶಕತೆ ಮಸೂದೆ ನಿಯಮ 1999 ಮತ್ತು 2000ರ ಅನುಸಾರ ಅಂಗೀಕರಿಸಿ, ಇಸ್ತ್ರೀ ಪೆಟ್ಟಿಗೆ ಮತ್ತು ನಾಲ್ಕು ಚಕ್ರದ ತಳ್ಳುವ ಗಾಡಿ ಹಾಗೂ ಸಂಬಂಧಿಸಿದ ಪರಿಕರಗಳ ಒಟ್ಟು 5 ವಿವಿಧ ಸಾಮಾಗ್ರಿಗಳಿಗೆ ತೆರಿಗೆ ಸೇರಿ **ರೂ.12,608–55ಗಳ (ರೂ. ಹನ್ನೇರಡು ಸಾವಿರದ ಆರು ನೂರ ಎಂಟು ಪೈಸೆ ಐವತ್ತೈದು ಮಾತ್ರ) ದರದಲ್ಲಿ ದರದಲ್ಲಿ ಮೆ॥ ಎಕ್ಸೆಲ್ ಸ್ಪೋಟ್ಸ್ ಆಂಡ್ ಸೈಂಟಿಪಿಕ್ಸ್, ನಂ: 02, ಮೆಜೆಸ್ಟಿಕ್ ಸರ್ಕಲ್, ಕೆಂಪೇಗೌಡ ರಸ್ತೆ, ಬೆಂಗಳೂರು–09**. ರವರಿಂದ ಖರೀದಿಸಲು ಸದರಿ ಸಂಸ್ಥೆಯವರಿಗೆ ಸರಬರಾಜು ಆದೇಶ ನೀಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ 28.03.2012ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಿದೆ.

## 4. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 365 /11-12:

ಅಪರ ಆಯುಕ್ತರು (ಯೋಜನೆ) ರವರ ದಿನಾಂಕ: 28.03.12ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪಶ್ಚಿಮ ವಲಯದ ಕಲ್ಯಾಣ ಇಲಾಖೆ ವತಿಯಿಂದ ವಿವಿಧ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿರುವ ಸಕಲ ವರ್ಗದ ಅಭ್ಯರ್ಥಿಗಳಿಗೆ ನಾಲ್ಕು ಚಕ್ರದ ತಳ್ಳುವ ಗಾಡಿ ಮತ್ತು ತಕ್ಕಡಿ ಸಾಮಾಗ್ರಿಗಳನ್ನು ವಿತರಿಸುವ ಸಲುವಾಗಿ ಈ ಕಛೇರಿಯ **ಟೆಂಡರ್ ಪ್ರಕಟಣೆ ಸಂಖ್ಯೆ: ಕಅ(ಪ)ಪಿಆರ್/51/10-11, ದಿನಾಂಕ: 05/12/2011** ರಂತೆ ಅರ್ಹ ಸರಬರಾಜು ಸಂಸ್ಥೆಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಮರು ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಈ ಸಂಬಂಧ ವೇಳಾ ಪಟ್ಟಿಯಂತೆ ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 22-12-2011 ರಂದು ತೆರೆಯಬೇಕಾಗಿದ್ದು, ಟೆಂಡರ್‌ಗಳನ್ನು ಸಲ್ಲಿಸಲು ನಿಗಧಿಪಡಿಸಿರುವ ಅಂತಿಮ ದಿನಾಂಕ: 20-12-2011ರಂದು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ದೋಷಗಳು ಉಂಟಾಗಿದ್ದು, ದಿನಾಂಕ: 21-12-2011ರ ಸಂಜೆ: 5:00 ಗಂಟೆಯವರೆಗೆ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕವನ್ನು ಮುಂದೂಡಲಾಗಿರುತ್ತದೆ. (ಅಂತರ್ಜಾಲದಲ್ಲಿ ತೆಗೆದ ಪ್ರತಿಯನ್ನು ಕಡತದಲ್ಲಿರಿಸಿದೆ). ಇದರನ್ವಯ ಎರಡು ದಿನಗಳು ಪೂರ್ಣಗೊಂಡ ನಂತರ ಅಂದರೆ ದಿನಾಂಕ: 24-12-2011ರಂದು ತಾಂತ್ರಿಕ ಬಿಡ್ ಪ್ರಸ್ತಾವನೆ ತೆರೆಯಲಾಗಿ ಸದರಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ನಿಗಧಿತ ಇಎಂಡಿ ಮೊತ್ತಗಳನ್ನು ಸಲ್ಲಿಸಿರುವವರ ಪೈಕಿ ತಾಂತ್ರಿಕ ಪ್ರಸ್ತಾವನೆಯನ್ನು ಪರಿಗಣಿಸಲು ಅರ್ಹರಾಗಿರುವ ಸಂಸ್ಥೆಗಳ ವಿವರ ಈ ಕೆಳಕಂಡಂತ್ತಿದೆ.

1. A P Diwakar (Eswar Enterprise)
2. Krishnamurthy R (Sri Krishna Enterprises)
3. Rajinder Singh Khanuja (Excel Sports and Branch Excel Scientifics)

ತಾಂತ್ರಿಕ ಪ್ರಸ್ತಾವನೆಯಲ್ಲಿ ನಿಗಧಿಪಡಿಸಿರುವ ಅಂಶಗಳ ಅನುಸಾರ ಸಂಸ್ಥೆಯವರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲು ಜಂಟಿ ಆಯುಕ್ತರು (ಪಶ್ಚಿಮ) ರವರ ಅಧ್ಯಕ್ಷತೆಯಲ್ಲಿ ಒಂದು ತಾಂತ್ರಿಕ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ಟೆಂಡರ್ ದಾಖಲೆಗಳನ್ನು ಪರಿಶೀಲಿಸಿ ಈ ಕೆಳಕಂಡಂತೆ ಪರಿಶೀಲನಾ ವರದಿಯನ್ನು ಸಲ್ಲಿಸಿರುತ್ತಾರೆ.

| ಕ್ರ.ಸಂ | ಸಂಸ್ಥೆಯ ಹೆಸರು | ತಾಂತ್ರಿಕ ಬಿಡ್ ಪರಿಶೀಲನಾ ವರದಿ ವಿವರ |
|---|---|---|
| 1 | A P Diwakar (Eshwar Enterprises) | ಸದರಿ ಸಂಸ್ಥೆಯವರು ಟೆಂಡರ್‌ನ ತಾಂತ್ರಿಕ ನಿಬಂಧನೆಗಳ ಪೈಕಿ ಕ್ರಮ ಸಂಖ್ಯೆ: (1)ರಲ್ಲಿ ಮೂರು ವರ್ಷಗಳ ಕಾರ್ಯಾದೇಶ ಸಲ್ಲಿಸಿದ್ದು, ಟೆಂಡರ್‌ನಲ್ಲಿ ಕೋರಿರುವಂತೆ ಮೂರು ವರ್ಷಗಳಿಗೆ ಸೇರಿ ₹.70.00 ಲಕ್ಷಗಳ ವಹಿವಾಟು ಇರುವುದಿಲ್ಲ. ಕ್ರಮ ಸಂಖ್ಯೆ: (4) ಮತ್ತು (5)ರಲ್ಲಿನ ದಾಖಲೆಗಳನ್ನು ಸಲ್ಲಿಸದೇ ಇದ್ದು, ಅಪೂರ್ಣ ದಾಖಲೆಗಳನ್ನು ಸಲ್ಲಿಸಿ, ಸಾಮಾನ್ಯ ನಿಬಂಧನೆಗಳ ಎಲ್ಲಾ ಷರತ್ತುಗಳನ್ನು ಒಪ್ಪಿಗೆ ಸೂಚಿಸಿದ್ದರೂ ಸಹ ಸದರಿ ಸಂಸ್ಥೆಯವರು ತಾಂತ್ರಿಕವಾಗಿ ಅರ್ಹತೆ ಹೊಂದಿರುವುದಿಲ್ಲವೆಂದು ಪರಿಶೀಲನಾ ಸಮಿತಿಯು ಸರ್ವಾನುಮತದಿಂದ ತಿರ್ಮಾನಿಸಿರುತ್ತದೆ. |
| 2 | Krishnamurthy R (Sri Krishna Enterprises) | ಸದರಿ ಸಂಸ್ಥೆಯವರು ಟೆಂಡರ್‌ನ ತಾಂತ್ರಿಕ ನಿಬಂಧನೆಗಳ ಪೈಕಿ 2009-10 ಮತ್ತು 2010-11ನೇ ಸಾಲಿನ ಎರಡು ವರ್ಷಗಳ ಕಾರ್ಯಾದೇಶ ಸಲ್ಲಿಸಿದ್ದು, ಟೆಂಡರ್‌ನಲ್ಲಿ ಕೋರಿರುವಂತೆ ಎರಡು ವರ್ಷಗಳಿಗೆ ಸೇರಿ ₹.70.00 ಲಕ್ಷಗಳ ವಹಿವಾಟು ಇರುವುದಿಲ್ಲ. 2008-09ನೇ ಸಾಲಿನ ಐಟಿಆರ್ ಮತ್ತು ಆಡಿಟ್ ಆಕೌಂಟ್ಸ್‌ಗೆ ವ್ಯತ್ಯಾಸವಿರುತ್ತದೆ. 2008-09ನೇ ಸಾಲಿನ ವ್ಯಾಟ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ಸಲ್ಲಿಸಿಲ್ಲ. 2009-10ನೇ ಸಾಲಿನ ಟರ್ನ್‌ಓವರ್ ಸರ್ಟಿಫಿಕೇಟ್ ಮತ್ತು ಆಡಿಟ್ ಆಕೌಂಟ್ಸ್‌ಗೆ ವ್ಯತ್ಯಾಸವಿದ್ದು, ಟೆಂಡರ್ ಮೊತ್ತಕ್ಕೆ ದುಪ್ಪಟ ಟರ್ನ್ ಓವರ್ ಇರುವುದಿಲ್ಲ. ಉಳಿದಂತೆ ಕೋರಿರುವ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿ, ಸಾಮಾನ್ಯ ನಿಬಂಧನೆಗಳ ಎಲ್ಲಾ ಷರತ್ತುಗಳನ್ನು ಒಪ್ಪಿಗೆ ಸೂಚಿಸಿದ್ದರೂ ಸಹ ಸದರಿ ಸಂಸ್ಥೆಯವರು ತಾಂತ್ರಿಕವಾಗಿ ಅರ್ಹತೆ ಹೊಂದಿರುವುದಿಲ್ಲವೆಂದು ಪರಿಶೀಲನಾ ಸಮಿತಿಯು ಸರ್ವಾನುಮತದಿಂದ ತಿರ್ಮಾನಿಸಿರುತ್ತದೆ. |
| 3 | Rajinder Singh Khanuja (Excel | ಸದರಿ ಸಂಸ್ಥೆಯವರು ಟೆಂಡರ್‌ನ ತಾಂತ್ರಿಕ ನಿಬಂಧನೆಗಳ ಪೈಕಿ 2009-10 ಮತ್ತು 2010- |

| | | |
|---|---|---|
| | Sports and Branch Excel Scientifics) | 11ನೇ ಸಾಲಿನ ಎರಡು ವರ್ಷಗಳ ಕಾರ್ಯಾದೇಶ ಸಲ್ಲಿಸಿದ್ದರೂ ಸಹ ಟೆಂಡರ್‌ನಲ್ಲಿ ಕೋರಿರುವಂತೆ ಎರಡು ವರ್ಷಗಳಿಗೆ ಸೇರಿ □.70.00 ಲಕ್ಷಗಳಿಗಿಂತ ಅಧಿಕ ವಹಿವಾಟು ಇದ್ದು, ಉಳಿದಂತೆ ಕೋರಿರುವ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿ, ಸಾಮಾನ್ಯ ನಿಬಂಧನೆಗಳ ಎಲ್ಲಾ ಷರತ್ತುಗಳನ್ನು ಒಪ್ಪಿಗೆ ಸೂಚಿಸಿದ್ದರೂ ಸಹ ಸಂಸ್ಥೆಯು ಆರ್ಥಿಕವಾಗಿ ಸಧೃಢವಾಗಿರುವುದನ್ನು ಪರಿಗಣಿಸಿ ಸಂಸ್ಥೆಯು ತಾಂತ್ರಿಕವಾಗಿ ಅರ್ಹತೆ ಹೊಂದಿರುವ ಇವರ ತಾಂತ್ರಿಕ ಬಿಡ್‌ನ್ನು ಅಂಗೀಕರಿಸಿ ಆರ್ಥಿಕ ಬಿಡ್‌ಗೆ ಪರಗಣಿಸಬಹುದೆಂದು ಪರಿಶೀಲನಾ ಸಮಿತಿಯು ಸರ್ವಾನುಮತದಿಂದ ತಿರ್ಮಾನಿಸಿರುತ್ತದೆ. |

ಮೇಲ್ಕಂಡಂತೆ ತಾಂತ್ರಿಕ ಬಿಡ್‌ನಲ್ಲಿ ಸಫಲರಾದ ಕ್ರ.ಸಂಖ್ಯೆ (3)ರಲ್ಲಿನ ಸಂಸ್ಥೆಯವರ ಆರ್ಥಿಕ ಬಿಡ್‌ನ್ನು e-Portal ಮುಖಾಂತರ ದಿನಾಂಕ:07–02–2012 ರಂದು ತೆರೆಯಲಾಗಿದ್ದು, ನಾಲ್ಕು ಚಕ್ರದ ತಳ್ಳುವ ಗಾಡಿ ಮತ್ತು ತಕ್ಕಡಿ ಸಾಮಾಗ್ರಿಗಳಿಗೆ ಈ ಕೆಳಕಂಡಂತೆ ದರಗಳನ್ನು ನಮೂದಿಸಿರುತ್ತಾರೆ.

| Sl. No | Items | | Rate/kit | Vat | Total |
|---|---|---|---|---|---|
| 1 | Weighing Machine with Relavent equipments for 10 kg capacity full steel body with stones | | 875.00 | 122.50 | 997.50 |
| 2 | FOUR WHEEL PUSHING CART | Size :- Length-66"/Width -35" Wood Thickness -3/4", and Flat 40x5 mm, Four Cycle tyres of 8 ply | 6820.00 | 342.00 | 7162.00 |
| **Total** | | | **7695.00** | **464.50** | **8159.50** |

ಮುಂದುವರೆದು, ಆರ್ಥಿಕ ಬಿಡ್‌ನಲ್ಲಿ ಟೆಂಡರ್‌ದಾರರು ಸಲ್ಲಿಸಿರುವ ದರಗಳ ಬಗ್ಗೆ ಚರ್ಚಿಸಲು ದಿನಾಂಕ: 08–02–2012 ರಂದು ಸದರಿ ಸಂಸ್ಥೆಯವರನ್ನು ದರ ಸಂಧಾನಕ್ಕೆ ಆಹ್ವಾನಿಸಲಾಗಿ, ಸದರಿ ಸಂಸ್ಥೆಯವರು ಟೆಂಡರ್ Specificationನಲ್ಲಿ ಕೋರಿರುವ ಸಾಮಾಗ್ರಿಗಳಿಗೆ ಅನುಗುಣವಾಗಿ ನಮೂದಿಸಿರುವ ಸಾಮಾಗ್ರಿಗಳ ದರವು ಸಮಂಜಸವಾಗಿದ್ದು, ಸದರಿ ದರಗಳಲ್ಲಿ ಕಡಿಮೆ ಮಾಡಲು ಸಾಧ್ಯವಿಲ್ಲವೆಂದು ಲಿಖಿತ ಪತ್ರದಲ್ಲಿ ತಿಳಿಸಿರುತ್ತಾರೆ.

ಸದರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ 2010–11ನೇ ಸಾಲಿನ ಆಯ–ವ್ಯಯ ಲೆಕ್ಕ ಶೀರ್ಷಿಕೆ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದ ಕಲ್ಯಾಣ ಕಾರ್ಯಕ್ರಮದಡಿ ಸಮುದಾಯದ ವೃತ್ತಿ ನಿರತರಿಗೆ ಅವರವರ ಕಸುಬುಗಳಿಗೆ ಆರ್ಥಿಕ ಸಹಾಯ ಕಾರ್ಯಕ್ರಮವಿದ್ದು, ಪ.ಜಾತಿ/ಪ.ಪಂಗಡದವರಿಗೆ ಈ ಕಾರ್ಯಕ್ರಮವನ್ನು ಆಯೋಜಿಸಿರುವುದಿಲ್ಲ. ಪ್ರಸ್ತುತ ಸದರಿ ವರ್ಗದವರಿಂದ ಸಹ ಬಹುತೇಕ ಅರ್ಜಿಗಳು ಬಂದಿದ್ದು, ಪ್ರತಿ ವಾರ್ಡಿಗೆ ಪ.ಜಾತಿ/ಪ.ಪಂಗಡದ 10 ಮಂದಿ ಹಾಗೂ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದ 10 ಮಂದಿ ಒಟ್ಟು 20 ಮಂದಿ ಫಲಾನುಭವಿಗಳಂತೆ 35 ವಾರ್ಡ್‌ಗಳಿಗೆ 700 ಫಲಾನುಭವಿಗಳಿಗೆ ತಳ್ಳುವ ಗಾಡಿ ಮತ್ತು ತಕ್ಕಡಿ ಸಲಕರಣೆಗಳನ್ನು ನೀಡಬೇಕಾಗಿರುತ್ತದೆ.

- ಪ.ಜಾತಿ/ಪ.ಪಂಗಡದ 350 ಮಂದಿ ಫಲಾನುಭವಿಗಳಿಗೆ ತಗಲುವ ಅಂದಾಜು ವೆಚ್ಚ □.35.00 ಲಕ್ಷಗಳನ್ನು ಪ.ಜಾತಿ/ಪ.ಪಂಗಡದ ಇತರೆ ಕಲ್ಯಾಣ ಕಾರ್ಯಕ್ರಮದಡಿ ಈಗಾಗಲೇ ರೂಪಿಸಿರುವ ಕಲ್ಯಾಣ ಕಾರ್ಯಕ್ರಮಗಳನ್ನು ಹೊರತುಪಡಿಸಿ ಇತರೆ ಯಾವುದಾದರೂ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು ಲೆಕ್ಕ ಶೀರ್ಷಿಕೆಯಲ್ಲಿ ನಿಗಧಿಪಡಿಸಿರುವ □.219.77 ಲಕ್ಷಗಳಲ್ಲಿ ಭರಿಸಬೇಕಾಗಿದೆ.

- ಈಗಾಗಲೇ ಹಿಂದುಳಿದ ವರ್ಗದ ಕಲ್ಯಾಣ ಕಾರ್ಯಕ್ರಮದಡಿ ಸದರಿ ಕಾರ್ಯಕ್ರಮಕ್ಕೆ ನಿಗಧಿಪಡಿಸಿರುವ ಅನುದಾನ □.74.70 ಲಕ್ಷಗಳಲ್ಲಿ 2009–10ನೇ ಸಾಲಿನ ಬಾಕಿ ಬಿಲ್ಲಿನ ಮೊತ್ತ □.44.92 ಲಕ್ಷಗಳನ್ನು ಪಾವತಿಸಿದ್ದು, □.29.78 ಲಕ್ಷಗಳು ಮಾತ್ರ ಉಳಿಕೆಯಾಗಿದ್ದು, □.15.00 ಲಕ್ಷಗಳಿಗೆ ಬಾರ್‌ಬರ್ ಛೇರ್‌ಗಳನ್ನು ಖರೀದಿಸಲು ಟೆಂಡರ್ ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಗೆ ಟಿಪ್ಪಣಿ ಸಲ್ಲಿಸಿದ್ದು, □.14.78 ಲಕ್ಷಗಳು ಮಾತ್ರ

ಉಳಿಕೆಯಾಗಿರುವುದರಿಂದ ಕೊರತೆ ಬೀಳುವ ಮೊತ್ತ □.20.22 ಲಕ್ಷಗಳನ್ನು 2011–12ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಹೆಚ್ಚಿನ ಅನುದಾನವನ್ನು ನಿಗಧಿಪಡಿಸಿಕೊಂಡು ವೆಚ್ಚ ಭರಿಸಬೇಕಾಗಿರುತ್ತದೆ.

ಈ ಮೇಲ್ಕಂಡಂತೆ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಎರಡು ಭಾರಿ ಟೆಂಡರ್ ಕರೆದರೂ ಸಹ ಯಾವುದೇ ಅರ್ಹ ಸಂಸ್ಥೆಯು ತಾಂತ್ರಿಕವಾಗಿ ಅರ್ಹತೆ ಹೊಂದದೇ ಟೆಂಡರ್ ಪ್ರಕ್ರಿಯೆಯು ವಿಫಲವಾಗುತ್ತಿರುವುದರಿಂದ 3ನೇ ಭಾರಿ ಕರೆದ ಮರು ಟೆಂಡರ್‌ನಲ್ಲಿ ಭಾಗವಹಿಸಿರುವ A P Diwakar (Eswar Enterprise) ಮತ್ತು Krishnamurthy R (Sri Krishna Enterprises) ಮತ್ತು Rajinder Singh Khanuja (Excel Sports and Branch Excel Scientifics) ಮೂರು ಸಂಸ್ಥೆಗಳ ಪೈಕಿ ತಾಂತ್ರಿಕ ದಾಖಲಾತಿಗಳನ್ನು ಪೂರ್ಣ ಪ್ರಮಾಣದಲ್ಲಿ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿರುವ Rajinder Singh Khanuja (Excel Sports and Branch Excel Scientifics) ಸಂಸ್ಥೆಯವರು ಏಕ ಮಾತ್ರ ಸಂಸ್ಥೆಯು ತಾಂತ್ರಿಕವಾಗಿ ಅರ್ಹತೆ ಹೊಂದಿರುತ್ತಾರೆ.

ಆದರೆ ಈಗಾಗಲೇ 3ನೇ ಭಾರಿ ಮರು ಟೆಂಡರ್ ಕರೆದ ಮೇರೆಗೆ ತಾಂತ್ರಿಕವಾಗಿ ಅರ್ಹತೆ ಹೊಂದಿರುವ ಏಕ ಮಾತ್ರ ಟೆಂಡರ್‌ದಾರರಾದ Rajinder Singh Khanuja (Excel Sports and Branch Excel Scientifics) ಸಂಸ್ಥೆಯವರ ಟೆಂಡರ್‌ನ್ನು ಕರ್ನಾಟಕ ಪಾರದರ್ಶಕತೆ ಮಸೂದೆ ನಿಯಮ 1999 ಮತ್ತು 2000ರ ಅನುಸಾರ ಅಂಗೀಕರಿಸಿ, ಮೂರನೇ ಗುಣಮಟ್ಟ ಪರೀಕ್ಷಿಸುವ ಸಂಸ್ಥೆಯಾದ ಮೆ॥ ಎಸ್.ಜಿ.ಎಸ್ ಇಂಡಿಯಾ ಲಿ., ಅಥವಾ ಉಪ ನಿರ್ದೇಶಕರು, ಕೈಗಾರಿಕ ಇಲಾಖೆ, ಬೆಂಗಳೂರು ನಗರ ರವರಿಂದ ಪರೀಕ್ಷಿಸಿ ಧೃಡೀಕರಿಸಿದ ಸಾಮಾಗ್ರಿಗಳ ಗುಣಮಟ್ಟ ಪ್ರಮಾಣ ಪತ್ರವನ್ನು ಪಡೆದು, ಟೆಂಡರ್ Specification ನಂತೆ ಒಂದು ತಳ್ಳುವ ಗಾಡಿ ಮತ್ತು ತಕ್ಕಡಿ ಸಾಮಾಗ್ರಿಗಳಿಗೆ ಎಲ್ಲಾ ತೆರಿಗೆಗಳು ಒಳಗೊಂಡಂತೆ □.8159.50/–ಗಳ (□.ಎಂಟು ಸಾವಿರದ ಒಂದು ನೂರ ಐವತ್ತೊಂಬತ್ತು ಪೈಸೆ ಐವತ್ತು ಮಾತ್ರ) ದರದಲ್ಲಿ **ಮೆ॥ ಎಕ್ಸೆಲ್ ಸ್ಪೋರ್ಟ್ಸ್ ಆಂಡ್ ಸೈಂಟಿಫಿಕ್ಸ್, ನಂ: 02, ಮೆಜೆಸ್ಟಿಕ್ ಸರ್ಕಲ್, ಕೆಂಪೇಗೌಡ ರಸ್ತೆ, ಬೆಂಗಳೂರು–09**. ರವರಿಂದ ಖರೀದಿಸಲು ಸದರಿ ಸಂಸ್ಥೆಯವರಿಗೆ ಸರಬರಾಜು ಆದೇಶದ ಅನುಮೋದನೆಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ 28.03.2012ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಿದೆ.

## 4. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 366 /11–12:

ಅಪರ ಆಯುಕ್ತರು (ಯೋಜನೆ) ರವರ ದಿನಾಂಕ: 28.03.12ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶ್ಚಿಮ ವಲಯಕ್ಕೆ ಸಂಬಂಧಿಸಿದಂತೆ ವಾರ್ಡ್ ಸಂಖ್ಯೆ 137ರಲ್ಲಿ ಶೇಕಡ 22.75ರ ಅನುದಾನದಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಠ ಪಂಗಡದವರಿಗೆ ವೈಯುಕ್ತಿಕವಾಗಿ ಪ್ರತ್ಯೇಕ ಮನೆಗಳನ್ನು ನಿರ್ಮಿಸಿಕೊಳ್ಳಲು ಈ ಕೆಳಕಂಡಂತೆ ಒಟ್ಟು □.3.00 ಲಕ್ಷಗಳಿಗೆ ಪರಿಶಿಷ್ಟ ಜಾತಿ / ಪರಿಶಿಷ್ಠ ಪಂಗಡದವರಿಗೆ ಗೃಹ ನಿರ್ಮಿಸಲು ಇಡಲಾಗಿರುವ ಮೊಬಲಗಿನಿಂದ ಮಂಜೂರು ಮಡಲು ಕೋರಿರುವ ಬಗ್ಗೆ.

- ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 05.08.2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪಶ್ಚಿಮ ವಲಯ ಆಯ್ಕೆ ಸಮಿತಿಯಿಂದ ಅನುಮೋದನೆಗೊಂಡಿರುತ್ತದೆ.

| ಕ್ರಮ ಸಂಖ್ಯೆ | ಕಾಮಗಾರಿ ವಿವರ | ಅಂದಾಜು ವೆಚ್ಚ (□.ಲಕ್ಷಗಳಲ್ಲಿ) |
|---|---|---|
| 1 | Construction of SC/ST individual houses at Rayapuram | 3.00 |

ತತ್ಸಂಬಂಧವಾಗಿ ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಮೇಲ್ಕಂಡ ಕಾಮಗಾರಿಗಳಿಗೆ ಕೋರಿರುವ ಮೊತ್ತ □.3.00 ಲಕ್ಷಗಳ ಪ್ರಸ್ತಾವನೆಯ ಅನುಮೋದನೆಗಾಗಿ ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ 28.03.2012ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಲಾಯಿತು.

## 5. **ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 367 /11–12:**

ಅಪರ ಆಯುಕ್ತರು (ಯೋಜನೆ) ರವರ ದಿನಾಂಕ: 28.03.12ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶ್ಚಿಮ ವಲಯಕ್ಕೆ ಸಂಬಂಧಿಸಿದಂತೆ ವಾರ್ಡ್ ಸಂಖ್ಯೆ 137ರಲ್ಲಿ ಶೇಕಡ 22.75ರ ಅನುದಾನದಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಠ ಪಂಗಡದವರಿಗೆ ವೈಯುಕ್ತಿಕವಾಗಿ ಪ್ರತ್ಯೇಕ ಮನೆಗಳನ್ನು ನಿರ್ಮಿಸಿಕೊಳ್ಳಲು ಈ ಕೆಳಕಂಡಂತೆ ಒಟ್ಟು □.3.00 ಲಕ್ಷಗಳಿಗೆ ಪರಿಶಿಷ್ಟ ಜಾತಿ / ಪರಿಶಿಷ್ಠ ಪಂಗಡದವರಿಗೆ ಗೃಹ ನಿರ್ಮಿಸಲು ಇಡಲಾಗಿರುವ ಮೊಬಲಗಿನಿಂದ ಮಂಜೂರು ಮಡಲು ಕೋರಿರುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 05.08.2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪಶ್ಚಿಮ ವಲಯ ಆಯ್ಕೆ ಸಮಿತಿಯಿಂದ ಅನುಮೋದನೆಗೊಂಡಿರುತ್ತದೆ.

| ಕ್ರಮ ಸಂಖ್ಯೆ | ಕಾಮಗಾರಿ ವಿವರ | ಅಂದಾಜು ವೆಚ್ಚ (□.ಕ್ಷಗಳಲ್ಲಿ) |
|---|---|---|
| 1 | Construction of SC/ST individual houses at Rayapuram | 3.00 |

ತತ್ಸಂಬಂಧವಾಗಿ ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಮೇಲ್ಕಂಡ ಕಾಮಗಾರಿಗಳಿಗೆ ಕೋರಿರುವ ಮೊತ್ತ □.3.00 ಲಕ್ಷಗಳ ಪ್ರಸ್ತಾವನೆಯ ಅನುಮೋದನೆಗಾಗಿ ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ 28.03.2012ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಲಾಯಿತು.

## 6. **ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 368 /11–12:**

ಅಪರ ಆಯುಕ್ತರು (ಯೋಜನೆ) ರವರ ದಿನಾಂಕ: 28.03.12ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶ್ಚಿಮ ವಲಯಕ್ಕೆ ಸಂಬಂಧಿಸಿದಂತೆ ವಾರ್ಡ್ ಸಂಖ್ಯೆ 137ರಲ್ಲಿ ಶೇಕಡ 22.75ರ ಅನುದಾನದಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಠ ಪಂಗಡದವರಿಗೆ ವೈಯುಕ್ತಿಕವಾಗಿ ಪ್ರತ್ಯೇಕ ಮನೆಗಳನ್ನು ನಿರ್ಮಿಸಿಕೊಳ್ಳಲು ಈ ಕೆಳಕಂಡಂತೆ ಒಟ್ಟು □.3.00 ಲಕ್ಷಗಳಿಗೆ ಪರಿಶಿಷ್ಟ ಜಾತಿ / ಪರಿಶಿಷ್ಠ ಪಂಗಡದವರಿಗೆ ಗೃಹ ನಿರ್ಮಿಸಲು ಇಡಲಾಗಿರುವ ಮೊಬಲಗಿನಿಂದ ಮಂಜೂರು ಮಾಡಲು ಕೋರಿರುವ ಬಗ್ಗೆ.

- ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 20.08.2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪಶ್ಚಿಮ ವಲಯ ಆಯ್ಕೆ ಸಮಿತಿಯಿಂದ ಅನುಮೋದನೆಗೊಂಡಿರುತ್ತದೆ.

- ಸದರಿ ವೆಚ್ಚವನ್ನು ಭರಿಸಲು 2011–12ನೇ ಸಾಲಿನ ಲೋಕೋಪಯೋಗಿ ದರಗಳಂತೆ ಅಂದಾಜುಪಟ್ಟಿಯನ್ನು ತಯಾರಿಸಲಾಗಿದೆ.

| ಕ್ರಮ ಸಂಖ್ಯೆ | ಕಾಮಗಾರಿ ವಿವರ | ಅಂದಾಜು ವೆಚ್ಚ (□.ಲಕ್ಷಗಳಲ್ಲಿ) |
|---|---|---|
| 1 | Construction of SC/ST individual houses at Rayapuram | 3.00 |

ತತ್ಸಂಬಂಧವಾಗಿ ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಮೇಲ್ಕಂಡ ಕಾಮಗಾರಿಗಳಿಗೆ ಕೋರಿರುವ ಮೊತ್ತ □.3.00 ಲಕ್ಷಗಳ ಪ್ರಸ್ತಾವನೆಯ ಅನುಮೋದನೆಗಾಗಿ ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ 28.03.2012ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಲಾಯಿತು.

## 7. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 369/11–12:

ಅಪರ ಆಯುಕ್ತರು (ಯೋಜನೆ) ರವರ ದಿನಾಂಕ: 28.03.12ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶ್ಚಿಮ ವಲಯಕ್ಕೆ ಸಂಬಂಧಿಸಿದಂತೆ ವಾರ್ಡ್ ಸಂಖ್ಯೆ 138ರಲ್ಲಿ ಶೇಕಡ 22.75ರ ಅನುದಾನದಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಠ ಪಂಗಡದವರಿಗೆ ವೈಯುಕ್ತಿಕವಾಗಿ ಪ್ರತ್ಯೇಕ ಮನೆಗಳನ್ನು ನಿರ್ಮಿಸಿಕೊಳ್ಳಲು ಈ ಕೆಳಕಂಡಂತೆ ಒಟ್ಟು ▫.3.00 ಲಕ್ಷಗಳಿಗೆ ಪರಿಶಿಷ್ಟ ಜಾತಿ / ಪರಿಶಿಷ್ಠ ಪಂಗಡದವರಿಗೆ ಗೃಹ ನಿರ್ಮಿಸಲು ಇಡಲಾಗಿರುವ ಮೊಬಲಗಿನಿಂದ ಮಂಜೂರು ಮಾಡಲು ಕೋರಿರುವ ಬಗ್ಗೆ.

- ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 24.10.2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪಶ್ಚಿಮ ವಲಯ ಆಯ್ಕೆ ಸಮಿತಿಯಿಂದ ಅನುಮೋದನೆಗೊಂಡಿರುತ್ತದೆ.
- ಸದರಿ ವೆಚ್ಚವನ್ನು ಭರಿಸಲು 2011–12ನೇ ಸಾಲಿನ ಲೋಕೋಪಯೋಗಿ ದರಗಳಂತೆ ಅಂದಾಜುಪಟ್ಟಿಯನ್ನು ತಯಾರಿಸಲಾಗಿದೆ.

| ಕ್ರಮ ಸಂಖ್ಯೆ | ಕಾಮಗಾರಿ ವಿವರ | ಅಂದಾಜು ವೆಚ್ಚ (▫.ಲಕ್ಷಗಳಲ್ಲಿ) |
|---|---|---|
| 1 | Construction of SC/ST individual houses at Rayapuram | 3.00 |

ತತ್ಸಂಬಂಧವಾಗಿ ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಮೇಲ್ಕಂಡ ಕಾಮಗಾರಿಗಳಿಗೆ ಕೋರಿರುವ ಮೊತ್ತ ▫.3.00 ಲಕ್ಷಗಳ ಪ್ರಸ್ತಾವನೆಯ ಅನುಮೋದನೆಗಾಗಿ ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ 28.03.2012ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಲಾಯಿತು.

## 8. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 370 /11–12:

ಅಪರ ಆಯುಕ್ತರು (ಯೋಜನೆ) ರವರ ದಿನಾಂಕ: 28.03.12ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶ್ಚಿಮ ವಲಯಕ್ಕೆ ಸಂಬಂಧಿಸಿದಂತೆ ದಿನಾಂಕ 23.03.2011 ರಂದು ಪಶ್ಚಿಮ ವಲಯ ಮಟ್ಟದ ಆಯ್ಕೆ ಸಮಿತಿ ಸಭೆಯಲ್ಲಿ ವಾರ್ಡ್ ಸಂಖ್ಯೆ 136 ಜೆ.ಜೆ.ಆರ್.ನಗರ ಜನತಾ ಕಾಲೋನಿ ಹಗೂ ದೇವರಾಜ್‌ಅರಸುನಗರ ಕೊಳಚೆ ಪ್ರದೇಶ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಠ ಪಂಗಡದವರಿಗೆ ಶೇಕಡ 22.75ರ ಅನುದಾನದಲ್ಲಿ ವೈಯುಕ್ತಿಕ ಗೃಹ ನಿರ್ಮಾಣ ಕಲ್ಪಿಸಲು 28 ಫಲಾನುಭವಿಗಳನ್ನು ಗುರುತಿಸಲಾಗಿದ್ದು ಅನುಮೋದನೆಯಾಗಿರುತ್ತದೆ.

ಕಂಡಿಕೆ 30 ರಲ್ಲಿ ವಿಶೇಷ ಆಯುಕ್ತರ (ಯೋಜನೆ) ರವರು 2011–12ನೇ ಸಾಲಿನ ಶೇಕಡ 22.75ರ ಅನುದಾನದಲ್ಲಿ ಕೈಗೊಳ್ಳಲು ನಲ್ಲಿ ಸೇರಿಸಿ ಅನುಮೋದನೆಗಾಗಿ ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ 25.03.2012ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಲಾಯಿತು.

## 9. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 371 /11–12:

ಅಪರ ಆಯುಕ್ತರು(ಯೋಜನೆ) ರವರ ದಿನಾಂಕ: 30.03.12ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಕ್ಷಿಣ ವಲಯಕ್ಕೆ ಸಂಬಂಧಿಸಿದಂತೆ ಬಿ.ಟಿ.ಎಂ.ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ ಸಂಖ್ಯೆ 146ರ ಲಕ್ಕಸಂದ್ರ ವ್ಯಾಪ್ತಿಯಲ್ಲಿ ಬರುವ ಚಂದ್ರಪ್ಪನಗರ ನಿವಾಸಿಗಳಿಗೆ 156 ಮನೆಗಳಿಗೆ ಹಾಗೂ ಬಿ.ಚಂದ್ರಪ್ಪನಗರದ ನಿವಾಸಿಗಳಿಗೆ 156 ಮನೆಗಳಿಗೆ ಒಟ್ಟು 312 ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರಿಗೆ ಗೃಹ ಉಪಯೋಗಕ್ಕಾಗಿ ಉಚಿತವಾಗಿ ಸೋಲಾರ್ ವಾಟರ್ ಹೀಟರ್‌ಗಳನ್ನು ಪೂರೈಸಿ ಅಳವಡಿಸಿಕೊಳ್ಳಲು ಈ ಕೆಳಕಂಡ ಕಾಮಗಾರಿಗಳನ್ನು ಶೇಕಡ 22.75ರ ಅನುದಾನದಡಿಯಲ್ಲಿ ಕೈಗೆತ್ತಿಕೊಳ್ಳಲು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ.ಮಹೇಶ್ ಬಾಬು ರವರು ಮಾನ್ಯ ವಿಶೇಷ ಆಯುಕ್ತರವರಿಗೆ ದಿನಾಂಕ 12.03.2012ರಂದು ಮನವಿ ಮಾಡಿಕೊಂಡಿರುತ್ತಾರೆ.

ಅದರಂತೆ ಈ ಕೆಳಕಂಡ ಕಾಮಗಾರಿಗಳಿಗೆ ಶೇಕಡ 22.75ರ ಅನುದಾನದಡಿಯಲ್ಲಿ ಆಡಳಿತಾತ್ಮಕ ಅನುಮೋದನೆ, ಜಾಬ್ ಕೋಡ್ ಮತ್ತು ಸದರಿ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖೇನ ನಿರ್ವಹಿಸಲು ಅನುಮೋದನೆ ಕೋರಿ ಕಾರ್ಯಪಾಲಕ ಅಭಿಯಂತರರು (ಬಿ.ಟಿ.ಎಂ.ಲೇಔಟ್) ರವರು ಕಡತವನ್ನು ಸಲ್ಲಿಸಿರುತ್ತಾರೆ.

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | Supply and Erection of Solar water heaters to individual houses in Chandrappanagara in Ward 146, Lakkasandra | 50.00 |
| 2 | Supply and Erection of Solar water heaters to individual houses in B.Chandrappanagara in Ward 146, Lakkasandra | 50.00 |
| | **Total** | **100.00** |

ಕಾರ್ಯಪಾಲಕ ಅಭಿಯಂತರರು (ಬಿ.ಟಿ.ಎಂ.ಲೇಔಟ್) ವಿಭಾಗರವರು ಸಲ್ಲಿಸಿರುವ ಪ್ರಸ್ತಾವಣೆಯಂತೆ ಮೇಲ್ಕಂಡ ಕಾಮಗಾರಿಗಳಿಗೆ ಶೇಕಡ 22.75ರ ಅನುದಾನದಡಿಯಲ್ಲಿ ಆಡಳಿತಾತ್ಮಕ ಅನುಮೋದನೆ, ಜಾಬ್ ಕೋಡ್ ಮತ್ತು ಸದರಿ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖೇನ ನಿರ್ವಹಿಸಲು ಅನುಮೋದನೆಗಾಗಿ ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ 30.03.2012ರ ಅಪರ ಆಯುಕ್ತರು (ಯೋಜನೆ)ರವರ ಟಿಪ್ಪಣಿ ಒಪ್ಪಲಾಯಿತು.

## 10. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 372 /11–12:

ಅಪರ ಆಯುಕ್ತರು(ಯೋಜನೆ) ರವರ ದಿನಾಂಕ: 30.03.12ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಕ್ಷಿಣ ವಲಯಕ್ಕೆ ಸಂಬಂಧಿಸಿದಂತೆ ಬಿ.ಟಿ.ಎಂ.ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ ಸಂಖ್ಯೆ 146ರ ಲಕ್ಕಸಂದ್ರ ವ್ಯಾಪ್ತಿಯಲ್ಲಿ ಬರುವ ಮಹಾಲಿಂಗೇಶ್ವರ ಬಡಾವಣೆಯ ಮುಖ್ಯರಸ್ತೆ ಬದಿಯ 156 ಮನೆಗಳಿಗೆ ಹಾಗೂ ಮಹಾಲಿಂಗೇಶ್ವರ ಬಡಾವಣೆಯ ಅಡ್ಡರಸ್ತೆ ಬದಿಯ 156 ಮನೆಗಳಿಗೆ ಒಟ್ಟು 312 ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರಿಗೆ ಗೃಹ ಉಪಯೋಗಕ್ಕಾಗಿ ಉಚಿತವಾಗಿ ಸೋಲಾರ್ ವಾಟರ್ ಹೀಟರ್‌ಗಳನ್ನು ಪೂರೈಸಿ ಅಳವಡಿಸಿಕೊಳ್ಳಲು ಈ ಕೆಳಕಂಡ ಕಾಮಗಾರಿಗಳನ್ನು ಶೇಕಡ 22.75ರ ಅನುದಾನದಡಿಯಲ್ಲಿ ಕೈಗೆತ್ತಿಕೊಳ್ಳಲು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ.ಮಹೇಶ್ ಬಾಬು ರವರು ಮಾನ್ಯ ವಿಶೇಷ ಆಯುಕ್ತರವರಿಗೆ ದಿನಾಂಕ 12.03.2012ರಂದು ಮನವಿ ಮಾಡಿಕೊಂಡಿರುತ್ತಾರೆ.

ಅದರಂತೆ ಈ ಕೆಳಕಂಡ ಕಾಮಗಾರಿಗಳಿಗೆ ಶೇಕಡ 22.75ರ ಅನುದಾನದಡಿಯಲ್ಲಿ ಆಡಳಿತಾತ್ಮಕ ಅನುಮೋದನೆ, ಜಾಬ್ ಕೋಡ್ ಮತ್ತು ಸದರಿ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖೇನ ನಿರ್ವಹಿಸಲು ಅನುಮೋದನೆ ಕೋರಿ ಕಾರ್ಯಪಾಲಕ ಅಭಿಯಂತರರು (ಬಿ.ಟಿ.ಎಂ.ಲೇಔಟ್) ರವರು ಕಡತವನ್ನು ಸಲ್ಲಿಸಿರುತ್ತಾರೆ.

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | Supply and Erection of Solar water heaters to individual houses in Mahalingeshwara Layout main road sides in Ward 146, Lakkasandra | 50.00 |
| 2 | Supply and Erection of Solar water heaters to individual houses in Mahalingeshwara Layout cross road sides in Ward 146, Lakkasandra | 50.00 |
| | **Total** | **100.00** |

ಕಾರ್ಯಪಾಲಕ ಅಭಿಯಂತರರು (ಬಿ.ಟಿ.ಎಂ.ಲೇಔಟ್) ವಿಭಾಗರವರು ಸಲ್ಲಿಸಿರುವ ಪ್ರಸ್ತಾವನೆಯಂತೆ ಮೇಲ್ಕಂಡ ಕಾಮಗಾರಿಗಳಿಗೆ ಶೇಕಡ 22.75ರ ಅನುದಾನದಡಿಯಲ್ಲಿ ಆಡಳಿತಾತ್ಮಕ ಅನುಮೋದನೆ, ಜಾಬ್ ಕೋಡ್ ಮತ್ತು ಸದರಿ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖೇನ ನಿರ್ವಹಿಸಲು ಅನುಮೋದನೆಗಾಗಿ ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**<u>ನಿರ್ಣಯ:</u>** ದಿನಾಂಕ 30.03.2012ರ ಅಪರ ಆಯುಕ್ತರು (ಯೋಜನೆ)ರವರ ಟಿಪ್ಪಣಿ ಒಪ್ಪಲಾಯಿತು.

## 11. <u>ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 373 /11–12:</u>

ಅಪರ ಆಯುಕ್ತರು(ಯೋಜನೆ) ರವರ ದಿನಾಂಕ: 30.03.12ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಕ್ಷಿಣ ವಲಯಕ್ಕೆ ಸಂಬಂಧಿಸಿದಂತೆ ಬಿ.ಟಿ.ಎಂ.ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ ಸಂಖ್ಯೆ 146ರ ಲಕ್ಕಸಂದ್ರ ವ್ಯಾಪ್ತಿಯಲ್ಲಿ ಬರುವ ಎಸ್.ಆರ್.ನಗರದ 156 ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರಿಗೆ ಗೃಹ ಉಪಯೋಗಕ್ಕಾಗಿ ಉಚಿತವಾಗಿ ಸೋಲಾರ್ ವಾಟರ್ ಹೀಟರ್‌ಗಳನ್ನು ಪೂರೈಸಿ ಅಳವಡಿಸಿಕೊಳ್ಳಲು ಈ ಕೆಳಕಂಡ ಕಾಮಗಾರಿಗಳನ್ನು ಶೇಕಡ 22.75ರ ಅನುದಾನದಡಿಯಲ್ಲಿ ಕೈಗೆತ್ತಿಕೊಳ್ಳಲು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ.ಮಹೇಶ್ ಬಾಬು ರವರು ಮಾನ್ಯ ವಿಶೇಷ ಆಯುಕ್ತರವರಿಗೆ ದಿನಾಂಕ 12.03.2012ರಂದು ಮನವಿ ಮಾಡಿಕೊಂಡಿರುತ್ತಾರೆ.

ಅದರಂತೆ ಈ ಕೆಳಕಂಡ ಕಾಮಗಾರಿಗಳಿಗೆ ಶೇಕಡ 22.75ರ ಅನುದಾನದಡಿಯಲ್ಲಿ ಆಡಳಿತಾತ್ಮಕ ಅನುಮೋದನೆ, ಜಾಬ್ ಕೋಡ್ ಮತ್ತು ಸದರಿ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖೇನ ನಿರ್ವಹಿಸಲು ಅನುಮೋದನೆ ಕೋರಿ ಕಾರ್ಯಪಾಲಕ ಅಭಿಯಂತರರು (ಬಿ.ಟಿ.ಎಂ.ಲೇಔಟ್) ರವರು ಕಡತವನ್ನು ಸಲ್ಲಿಸಿರುತ್ತಾರೆ.

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | Supply and Erection of Solar water heaters to individual houses in S.R.Nagar in Ward 146, Lakkasandra | 50.00 |
| **Total** | | **50.00** |

ಕಾರ್ಯಪಾಲಕ ಅಭಿಯಂತರರು (ಬಿ.ಟಿ.ಎಂ.ಲೇಔಟ್) ವಿಭಾಗರವರು ಸಲ್ಲಿಸಿರುವ ಪ್ರಸ್ತಾವನೆಯಂತೆ ಮೇಲ್ಕಂಡ ಕಾಮಗಾರಿಗಳಿಗೆ ಶೇಕಡ 22.75ರ ಅನುದಾನದಡಿಯಲ್ಲಿ ಆಡಳಿತಾತ್ಮಕ ಅನುಮೋದನೆ, ಜಾಬ್ ಕೋಡ್ ಮತ್ತು ಸದರಿ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖೇನ ನಿರ್ವಹಿಸಲು ಅನುಮೋದನೆಗಾಗಿ ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**<u>ನಿರ್ಣಯ:</u>** ದಿನಾಂಕ 30.03.2012ರ ಅಪರ ಆಯುಕ್ತರು (ಯೋಜನೆ)ರವರ ಟಿಪ್ಪಣಿ ಒಪ್ಪಲಾಯಿತು.

## 12. <u>ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 374/11–12:</u>

ಅಪರ ಆಯುಕ್ತರು(ಯೋಜನೆ) ರವರ ದಿನಾಂಕ: 30.03.12ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಕ್ಷಿಣ ವಲಯಕ್ಕೆ ಸಂಬಂಧಿಸಿದಂತೆ ಶ್ರೀ ಶ್ರೀನಿವಾಸ್ ಕೆ.ಎಸ್, #116, 2ನೇ ಮೈನ್, 6ನೇ ಕ್ರಾಸ್, ಬಿ.ಚಂದ್ರಪ್ಪನಗರ, ಬನ್ನೇರುಘಟ್ಟ ರಸ್ತೆ, ಡೈರಿ ಸರ್ಕಲ್ ಹತ್ತಿರ, ಅಡುಗೋಡಿ, ಬೆಂಗಳೂರು–30 ರವರು ಅಪರ ಆಯುಕ್ತರು (ಕಲ್ಯಾಣ) ರವರಿಗೆ ಮನವಿ ಸಲ್ಲಿಸಿ, ಸದರಿಯವರು 2011ನೇ ಸಾಲಿನ ಕೆ.ಎ.ಎಸ್.ಪರೀಕ್ಷೆ ಬರೆಯಲು ಬೇಕಾಗುವ “ಪೂರ್ವ ಸಿದ್ದತಾ” ತರಬೇತಿ ಪಡೆಯಲು ತಗಲುವ ವೆಚ್ಚ ರೂ.20,000/– ಗಳನ್ನು ಶೇಕಡ 22.75ರ ಅನುದಾನದಡಿಯಲ್ಲಿ ಸಹಾಯಧನವನ್ನು ಬಿಡುಗಡೆಗೊಳಿಸಬೇಕೆಂದು ಕೋರಿರುತ್ತಾರೆ.

ಅಭ್ಯರ್ಥಿಯು ಅನುಸೂಚಿತ ಜಾತಿ (ಆದಿ ಕರ್ನಾಟಕ) ಗೆ ಸೇರಿದ್ದು, ಆರ್ಥಿಕವಾಗಿ ಹಿಂದುಳಿದಿದ್ದು, ಕೆ.ಎ.ಎಸ್.ಪರೀಕ್ಷೆ ಬರೆಯಲು ಬೇಕಾಗುವ “ಪೂರ್ವ ಸಿದ್ದತಾ” ತರಬೇತಿ ಪಡೆಯಲು ಎಲ್ಲಾ ದಾಖಲೆಗಳನ್ನು ಸಲ್ಲಿಸಿರುತ್ತಾರೆ.

ಕೆ.ಎ.ಎಸ್.ಪರೀಕ್ಷೆ ಬರೆಯಲು ಬೇಕಾಗುವ ಪೂರ್ವ ಸಿದ್ದತಾ ತರಬೇತಿಯನ್ನು ಮೆ॥ ಯೂನಿವರ್ಸಲ್ ಕೋಚಿಂಗ್ ಸೆಂಟರ್, ವಿಜಯನಗರದಲ್ಲಿ ವ್ಯಾಸಂಗ ಮಡುತ್ತಿದ್ದು, ವ್ಯಾಸಂಗಕ್ಕೆ ತಗಲುವ ವೆಚ್ಚ ರೂ.20,000/–ಗಳಾಗುತ್ತದೆ. ಆದ್ದರಿಂದ ಶಿಕ್ಷಣ ಶುಲ್ಕವನ್ನು ಭರಿಸಲು ಕೋರಿರುತ್ತಾರೆ.

ಸದರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ 2010–11ನೇ ಸಾಲಿನ ಆಯ–ವ್ಯಯ ಲೆಕ್ಕ ಶೀರ್ಷಿಕೆ ಅನುಸೂಚಿತ ಜಾತಿ / ಪಂಗಡದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಹಾಯಧನ ಕಾರ್ಯಕ್ರಮ ಉಪಶೀರ್ಷಿಕೆಯಲ್ಲಿ ರೂ.60.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಿರುವ ಮೇರೆಗೆ ಶ್ರೀ ಶ್ರೀನಿವಾಸ್.ಕೆ.ಎಸ್.ರವರಿಗೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯು ನಿರ್ಣಯಿಸುವ ತೀರ್ಮಾನದಂತೆ ರೂ.20,000/–ಗಳ ಸಹಾಯಧನವನ್ನು ನೀಡಬೇಕಾಗಿರುತ್ತದೆ.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಶ್ರೀನಿವಾಸ್.ಕೆ.ಎಸ್.ರವರಿಗೆ ರೂ.20,000/–ಗಳ ಸಹಾಯಧನವನ್ನು ನೀಡಲು ಅನುಮೋದನೆಗಾಗಿ ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ 30.03.2012ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಲಾಯಿತು.

## 13. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 375/11–12:

ವಾರ್ಡ್ 72ರ ಹೇರೋಹಳ್ಳಿ ವ್ಯಾಪ್ತಿಯಲ್ಲಿ ಅಬಿವೃದ್ಧಿ ಕಾಮಗಾರಿಗಳಿಗೆ ಶೇಕಡ 22.75ರ ಅನುದಾನದಡಿಯಲ್ಲಿ ರೂ.250.00 ಲಕ್ಷಗಳ ಮಂಜೂರಾತಿ ಕೋರಿ ಕಡತ ಮಂಡಿಸಿ, ಅದರಂತೆ ಅನುಮೋದನೆಗೊಂಡಿರುತ್ತದೆ. ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಸಭೆಯ ದಿನಾಂಕ 15.02.2012ರ ವಿಷಯದ ಸಂಖ್ಯೆ 308/11–12 ರಲ್ಲಿ ಸದರಿ ಕಾಮಗಾರಿಗಳನ್ನು 2012–13ನೇ ಸಾಲಿನಲ್ಲಿ ಕೈಗೊಳ್ಳುವಂತೆ ತೀರ್ಮಾನಿಸಲಾಗಿರುತ್ತದೆ.

ಮಾನ್ಯ ಸದಸ್ಯರು ಸಮಿತಿಗೆ ಮನವಿಯನ್ನು ಸಲ್ಲಿಸಿ ಸದರಿ ಪ್ರದೇಶವು ಹೊಸದಾಗಿ ಪಾಲಿಕೆಗೆ ಸೇರ್ಪಡೆಯಾಗಿರುವುದರಿಂದ, ಮೂಲಭೂತ ಸೌಕರ್ಯಗಳಿಲ್ಲದೆ ಇಲ್ಲಿನ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದೆಯೆಂದು ತಿಳಿಸಿರುತ್ತಾರೆ. ಆದ್ದರಿಂದ ಈಗಾಗಲೇ ಮಂಜೂರಾಗಿರುವ ಕಾಮಗಾರಿಗಳಿಗೆ ಪ್ರಸಕ್ತ ಸಾಲಿನ ಕ್ರಿಯಾ ಯೋಜನೆಯಲ್ಲಿ ಸೇರಿಸಿ ಜಾಬ್ ಸಂಖ್ಯೆ ನೀಡಲು ಕೋರಿರುತ್ತಾರೆ.

**ನಿರ್ಣಯ:** 2011–12ನೇ ಸಾಲಿನಲ್ಲಿರುವ ಅನುದಾನದ ಲಭ್ಯತೆ ಮೇರೆಗೆ ಇದೇ ವರ್ಷ ಕೈಗೆತ್ತಿಗೊಳ್ಳಲು ತೀರ್ಮಾನಿಸಲಾಯಿತು.

## 14. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 376/11–12:

ದಾಸರಹಳ್ಳಿ ವಲಯ ವ್ಯಾಪ್ತಿಗೆ ಬರುವ ವಾರ್ಡ್‌ಗಳಲ್ಲಿ 2011–12ನೇ ಸಾಲಿಗೆ ಶೇಕಡ 22.75ರ ಅನುದಾನದಡಿಯಲ್ಲಿ ವೈಯುಕ್ತಿಕ ಮನೆ ನಿರ್ಮಾಣ ಮಾಡಲು ಈಗಾಗಲೇ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯು ದಿನಾಂಕ 04.06.2011 ರಮದು ಮತ್ತು 15.02.2012 ರಂದು ಈ ಕೆಳಕಂಡ ವಾರ್ಡ್‌ಗಳಿಗೆ ಮನೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆಯು ಕೈಬಿಟ್ಟುಹೋಗಿದ್ದು, ಈ ಕೂಡಲೇ ಕೆಳಕಂಡ ವಾರ್ಡ್‌ಗಳಿಗೆ ಮನೆಗಳನ್ನು 2011–12ನೇ ಕ್ರಿಯಾ ಯೋಜನೆಯಲ್ಲಿ ಸೇರಿಸಿ ಜಾಬ್ ಸಂಖ್ಯೆ ನೀಡುವ ಸಂಬಂಧ ಪೂಜ್ಯ ಮಹಾಪೌರರು ಟಿಪ್ಪಣಿಯನ್ನು ನೀಡಿರುತ್ತಾರೆ. ವಿವರ ಈ ಕೆಳಕಂಡಂತಿರುತ್ತದೆ.

| ಕ್ರ. ಸಂ. | ವಾರ್ಡ್ ಹೆಸರು ಮತ್ತು ಸಂಖ್ಯೆ | ಮಂಜೂರಾತಿ ನೀಡಬೇಕಾದ ಮನೆಗಳ ಸಂಖ್ಯೆ | ಅನುದಾನದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಶೆಟ್ಟಿಹಳ್ಳಿ – 12 | 386 | 1158 |
| 2 | ಮಲ್ಲಸಂದ್ರ – 13 | 94 | 282 |
| 3 | ಬಾಗಲಗುಂಟೆ – 14 | 71 | 213 |
| 4 | ದಾಸರಹಳ್ಳಿ | 98 | 294 |

| | | | |
|---|---|---|---|
| 5 | ಚೊಕ್ಕಸಂದ್ರ – 39 | 51 | 153 |
| 6 | ಪೀಣ್ಯ ಕೈಗಾರಿಕಾ ಪ್ರದೇಶ – 41 | 44 | 132 |
| 7 | ರಾಜಗೋಪಾಲನಗರ –70 | 33 | 99 |
| 8 | ಹೆಗ್ಗನಹಳ್ಳಿ – 71 | 34 | 102 |

**ನಿರ್ಣಯ:** ಪೂಜ್ಯ ಮಹಾಪೌರರರ ಕೋರಿಕೆಯನ್ನು ಅನುದಾನ ಲಭ್ಯತೆ ಮೇರೆಗೆ ಪರಿಗಣಿಸಲು ಒಪ್ಪಲಾಯಿತು.

### 15. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 377/11–12:

ವಿಕಲಚೇತನರಿಗೆ ಹೆಚ್ಚುವರಿ ಎರಡು ಚಕ್ರಗಳನ್ನು ಆಳವಡಿಸಿ ನೀಡಲಾಗುವ ದ್ವಿಚಕ್ರ ಮೋಟಾರ್ ವಾಹನವನ್ನು ಖರೀದಿಸಿ ಸರಬರಾಜು ಮಾಡಲು ಸ್ಥಾಯಿ ಸಮಿತಿಯಿಂದ ಅನುಮೋದನೆಗೊಂಡಿದ್ದು, ಹೊಂಡಾ 100 ಸಿಸಿ ವಾಹನವು ಮಾರುಕಟ್ಟೆಯಲ್ಲಿ ಲಭ್ಯವಿಲ್ಲದಿರುವುದರಿಂದ ಹಾಗೂ 110 ಸಿಸಿ ಹೊಂಡಾ ವಾಹನವು ಲಭ್ಯತೆ ಇದ್ದರೂ ಸುಮಾರು 4 ರಿಂದ 8 ತಿಂಗಳವರೆಗೆ ಬುಕ್ಕಿಂಗ್ ಇರುವುದರಿಂದ ಈ ವಾಹನಗಳನ್ನು ನೀಡಲು ಸಾಧ್ಯವಿರುವುದಿಲ್ಲವೆಂದು ಅವುಗಳ ಬದಲಾಗಿ ಟೆಂಡರ್‌ನಲ್ಲಿ ನಮೂದಿಸಿರುವ ಇನ್ನೊಂದು ವಾಹನ ಮಹೇಂದ್ರ ಫ್ಲೈಟ್ 125 ಸಿಸಿ ವಾಹನವು ಮಾರುಕಟ್ಟೆಯಲ್ಲಿ ಲಭ್ಯತೆ ಇರುವುದರಿಂದ ಹಾಗೂ ಇದನ್ನು 110 ಸಿಸಿ ಹೊಂಡಾ ವಾಹನಕ್ಕಿಂತ ಕಡಿಮೆ ದರದಲ್ಲಿ ನೀಡುವುದಾಗಿ ದರ ಸಂಧಾನ ಪತ್ರದಲ್ಲಿ ಮೆ:ದೀಕ್ಷಾ ಎಂಟರ್ ಪ್ರೈಸಸ್ ರವರು ಸಮಿತಿಗೆ ಮನವಿ ಪತ್ರವನ್ನು ನೀಡಿರುತ್ತಾರೆ.

ಮಾನ್ಯ ಆಯುಕ್ತರ ಸುತ್ತೋಲೆ ದಿನಾಂಕ 17.03.2011ರ ಪ್ರಕಾರ 100 ಸಿಸಿ ಯಿಂದ 125 ಸಿಸಿ ಒಳಗಿರುವ ವಾಹನವನ್ನು ಖರೀದಿಸಬಹುದಾಗಿರುತ್ತದೆ.

**ನಿರ್ಣಯ:** ಮಾನ್ಯ ಆಯುಕ್ತರ ಸುತ್ತೋಲೆ ದಿನಾಂಕ 17.03.2012ರ ಪ್ರಕಾರ ಹೆಚ್ಚು ಶಕ್ತಿ ಸಾಮರ್ಥ್ಯವುಳ್ಳ 125ಸಿಸಿ ದ್ವಿಚಕ್ರ ಮೋಟಾರ್ ವಾಹನಗಳನ್ನು ಖರೀದಿಸಲು ಸಮಿತಿಯು ಒಪ್ಪಿತು.

### 16. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 378/11–12:

ಅಪರ ಆಯುಕ್ತರು(ಯೋಜನೆ) ರವರ ದಿನಾಂಕ: 30.03.12ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಕ್ಷಿಣ ವಲಯಕ್ಕೆ ಸಂಬಂಧಿಸಿದಂತೆ ವಾರ್ಡ್ 141, ಅಜಾದ್‌ನಗರದಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ಪ್ರತ್ಯೇಕ ಮನೆ ನಿರ್ಮಾಣ ಸದರಿ ವಾರ್ಡಿನಲ್ಲಿ 9 ಫಲಾನುಭವಿಗಳನ್ನು ಆಯ್ಕೆ ಸಮಿತಿಯು ಈ ಕೆಳಕಂಡವರನ್ನು ಆಯ್ಕೆ ಮಾಡಿ ಅನುಮೋದನೆ ನೀಡಿರುತ್ತದೆ.

| ಕ್ರ. ಸಂ. | ಫಲಾನುಭವಿಗಳ ಹೆಸರು ಮತ್ತು ವಿಳಾಸ | ಅಂದಾಜು ಮೊತ್ತ | ಕ್ರ. ಸಂ. | ಫಲಾನುಭವಿಗಳ ಹೆಸರು ಮತ್ತು ವಿಳಾಸ | ಅಂದಾಜು ಮೊತ್ತ |
|---|---|---|---|---|---|
| 1 | ರಾಣಿ ಕೋಂ. ಸುಬ್ರಮಣಿ<br>ನಂ.170, ಅಶ್ವತ್ ಕಟ್ಟೆ<br>ಬಂಡೆ ಸ್ಲಮ್ | 3.00 | 6 | ಲಕ್ಷ್ಮಮ್ಮ<br>ಕೋಂ.ಎಲ್ಲಪ್ಪ,<br>ನಂ.44, ವಾಲ್ಮೀಕಿನಗರ,<br>ಮೈಸೂರು ರಸ್ತೆ. | 3.00 |
| 2 | ನರಸಮ್ಮ<br>ಕೋಂ. ದಿ.ಸಿ.ಎಲ್.ಮುನಿಯಪ್ಪ<br>ನಂ.17 ವಾಲ್ಮೀಕಿನಗರ,<br>ಮೈಸೂರು ರಸ್ತೆ. | 3.00 | 7 | ಎಂ.ಸಾಗರ<br>ಬಿನ್ ಲೇಟ್ ಶೆಟ್ಟಪ್ಪ<br>ನಂ.9, ವಾಲ್ಮೀಕಿನಗರ,<br>ಮೈಸೂರು ರಸ್ತೆ. | 3.00 |
| 3 | ಎನ್.ಕಾಂತರಾಜು<br>ಬಿನ್.ವೆಂಕಟಜೀವಪ್ಪ<br>ನಂ.53/1, ವಾಲ್ಮೀಕಿನಗರ, | 3.00 | 8 | ಎ.ಭುವನೇಶ್ವರಿ<br>ಕೋಂ.ಆರುಗ್ಮಂ<br>ನಂ.33, 2ನೇ ಮುಖ್ಯರಸ್ತೆ, | 3.00 |

| | | | | | |
|---|---|---|---|---|---|
| | ಮೈಸೂರು ರಸ್ತೆ. | | | ವಾಲ್ಮೀಕಿನಗರ,<br>ಮೈಸೂರು ರಸ್ತೆ. | |
| 4 | ಬಿ.ಹೆಚ್.ರಘು<br>ಬಿನ್ ರೇವಣ್ಣ<br>ನಂ.44, ವಾಲ್ಮೀಕಿನಗರ,<br>ಮೈಸೂರು ರಸ್ತೆ. | 3.00 | 9 | ಎಂ.ಜಿ.ಮುನಿಯಪ್ಪ<br>ಬಿನ್ ಲೇಟ್ ಗೋವಿಂದಪ್ಪ,<br>ನಂ.130, ವಾಲ್ಮೀಕಿನಗರ,<br>ಮೈಸೂರು ರಸ್ತೆ. | 3.00 |
| 5 | ಕೃಷ್ಣಪ್ಪ<br>ಬಿನ್ ಮುನಿಸ್ವಾಮಯ್ಯ,<br>ನಂ.44/2, ವಾಲ್ಮೀಕಿನಗರ,<br>ಮೈಸೂರು ರಸ್ತೆ. | 3.00 | | | |

ಶೇಕಡ 22.75ರ ಅನುದಾನದಲ್ಲಿ ಮನೆ ನಿರ್ಮಿಸಲು ಪಶ್ಚಿಮ ವಲಯದ ಆಯ್ಕೆ ಸಮಿತಿಯಿಂದ ಒಟ್ಟು 9 ಫಲಾನುಭವಿಗಳಿಗೆ ಅನುಮೋದನೆ ನೀಡಲಾಗಿದೆ. ಆದುದರಿಂದ ಸದರಿ ಫಲಾನುಭವಿಗಳು ವಾಸದ ಮನೆ ನಿರ್ಮಿಸಲು ಒಟ್ಟು ರೂ.27.00 ಲಕ್ಷಗಳ ಅನುದಾನ ಬಿಡುಗಡೆ ಮತ್ತು ಅಂದಾಜು ಪಟ್ಟಿಗೆ ಜಾಬ್ ನಂಬರ್ ನೀಡಲು ಅನುಮೋದನೆಗಾಗಿ ಸಾಮಾಜಿಕ ನ್ಯಯ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯನ್ನು ಒಪ್ಪಿದೆ.

**(ಕೆ.ಮಹೇಶ್ ಬಾಬು)**
**ಅಧ್ಯಕ್ಷರು**
**ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ.**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**